ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

ಋಷಿಗಳು ಹೇಳಿಕೊಟ್ಟಂತೆ
ನಾವು ಧ್ಯಾನವನ್ನು ಕಲಿಸುತ್ತೇವೆ.

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂಪುಟ 16 ಸಂಚಿಕೆ 5 ಮೇ 2019 ರೂ.25

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

**ಅನು: ಚಂಪಾ**

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಅಕ್ಟೋಬರ್ 2004ರ ಸಂಚಿಕೆ)

ನನ್ನನ್ನು ಭೇಟಿ ಮಾಡುವ ಮತ್ತು ನನ್ನೊಂದಿಗೆ ಸಮಯ ಕಳೆಯುವ ಗೀಳು ಕೆಲವರಲ್ಲಿದೆ. ಅದನ್ನು ಅರ್ಥ ಮಾಡಿಕೊಳ್ಳಬಹುದು. ಹಲವಾರು ಬಾರಿ 'ಇಲ್ಲ' ಎಂದ ಮೇಲೆ ನಾನು ಭೇಟಿ ಮಾಡಲು ಒಪ್ಪಿಕೊಳ್ಳುತ್ತೇನೆ. ನಾವು ಭೇಟಿ ಮಾಡುತ್ತೇವೆ, ಮಾತನಾಡುತ್ತೇವೆ, ಅದರಲ್ಲೇ ದಿನದ ಸ್ವಲ್ಪ ಭಾಗ ಕಳೆಯುತ್ತೇವೆ. ನನ್ನ ಭಾಗದ ಕೆಲಸವನ್ನು, ಕರ್ತವ್ಯವನ್ನು ಮಾಡಿದ್ದೇನೆಂಬ ತೃಪ್ತಿಯಿಂದ ನಾನು ನನ್ನ ಕೋಣೆಗೆ ತೆರಳುತ್ತೇನೆ. ಭಾಗಶಃ ತೃಪ್ತನಾಗಿ. ಮತ್ತು ದುಃಖಿತನಾಗಿ. ದುಃಖಿತನಾಗಿ, ಏಕೆಂದರೆ ನನ್ನಲ್ಲಿರುವ ಸಂಪತ್ತನ್ನು ಕೊಡಲಾಗಲಿಲ್ಲವಲ್ಲಾ ಎಂದು.

ಸಾಮಾನ್ಯವಾಗಿ ಜನರು ತಮ್ಮ ಸಮಸ್ಯೆಗಳನ್ನು ಮತ್ತು ಕಷ್ಟಗಳನ್ನು ಹೇಳಿಕೊಳ್ಳಲು ಬರುತ್ತಾರೆ; ಅವರ ಮಾತನ್ನು ನಿಜವಾದ ಕಳಕಳಿಯಿಂದ ಮತ್ತು ಗೌರವದಿಂದ ಕೇಳಿಸಿಕೊಂಡ ಮೇಲೆ ಋಷಿಗಳ ಸೂಚನೆಗಳಿಗೆ ತಕ್ಕಂತೆ ನಾನು ಅವರಿಗೆ ಸಲಹೆ ನೀಡುತ್ತೇನೆ, ಸಮಾಧಾನ ಹೇಳುತ್ತೇನೆ. ಆದರೆ ಅವರು ಎದುರಿಸುತ್ತಿರುವ ಸಮಸ್ಯೆಗಳಲ್ಲಿರುವ ಆಧ್ಯಾತ್ಮಿಕ ಪಾಠಗಳನ್ನು ಹೇಳಿ, ಸಮಸ್ಯೆಗಳು ಪುನಃ ಬರದಂತೆ ಆಧ್ಯಾತ್ಮಿಕವಾಗಿ ತಿದ್ದಿಕೊಳ್ಳಲು ಹೇಳಿದರೆ, ಅವರು ಆತುರಾತುರವಾಗಿ ಭೇಟಿಯನ್ನು ಮುಗಿಸಲೆಳಸುತ್ತಾರೆ! ಅವರಿಗೆ ತಾತ್ಕಾಲಿಕ ವಿಮೋಚನೆ ಬೇಕಷ್ಟೆ, ನಿವಾರಣೆಯಲ್ಲ.

ಕೆಲವೊಮ್ಮೆ ಜನರು ತಮ್ಮ ಅನುಭವಗಳ ಬಗ್ಗೆ ಹೇಳಿಕೊಳ್ಳಲು ಬರುತ್ತಾರೆ, ಅಥವಾ ಯಾವುದೇ ವಿಷಯವೂ ಇಲ್ಲದೆ ಸುಮ್ಮನೆ ಹರಟೆ ಹೊಡೆಯಲು ಬರುತ್ತಾರೆ. ಕೆಲವೊಮ್ಮೆ ಕೇವಲ ನನ್ನ ದರ್ಶನಕ್ಕಾಗಿ ಬಂದೆ ಎನ್ನುತ್ತಾರೆ! ನನ್ನ ದರ್ಶನ ಅಥವಾ ಸಾನ್ನಿಧ್ಯ ಪ್ರೇರಕ ಶಕ್ತಿಯಾಗಿರಬಹುದು. ಆದರೆ ಅಷ್ಟೇ ಸಾಲದು. ಬದಲಾಗಲು, ಬೆಳೆಯಲು ಮತ್ತು ಆಧ್ಯಾತ್ಮಿಕವಾಗಿ ಪ್ರಗತಿ ಹೊಂದಲು ಜನರಿಗೆ ಜ್ಞಾನ, ತಂತ್ರ ಮತ್ತು ಮಾರ್ಗದರ್ಶನ ಬೇಕಾಗುತ್ತದೆ. ಅವರು ಅವುಗಳನ್ನು ಪಡೆಯಬೇಕು, ಕೇಳಿಸಿಕೊಳ್ಳಬೇಕು ಮತ್ತು ಅವುಗಳಿಗೆ ತೆರೆದುಕೊಳ್ಳಬೇಕು. ಇಲ್ಲದಿದ್ದರೆ, ಭೇಟಿ ಕೇವಲ ಕಾಲಹರಣವಾಗುತ್ತದೆ.

ಜನರು ಸರಳ ರೀತಿಗಳಲ್ಲೇ ತೃಪ್ತಿ ಪಟ್ಟುಕೊಳ್ಳುತ್ತಾರೆ – ದೇವಸ್ಥಾನಕ್ಕೆ ಹೋಗುವುದು, ಪ್ರವಚನ ಕೇಳುವುದು, ಒಬ್ಬ ಗುರುವನ್ನು ಭೇಟಿ ಮಾಡುವುದು ಇತ್ಯಾದಿ. ಅಧ್ಯಾತ್ಮದ ಪಯಣವು ಇಷ್ಟಕ್ಕೇ ಮುಗಿದರೆ, ಪಯಣ ಮಾಡಿದಂತೆಯೇ ಆಗಲಿಲ್ಲ. ನಾವು ಸಾಧನೆಯನ್ನು ಗಂಭೀರವಾಗಿ ಪರಿಗಣಿಸಬೇಕು; ಅಧ್ಯಾತ್ಮಿಗಳಾಗಲು ತೀವ್ರ ಪ್ರಯತ್ನ ಮಾಡಬೇಕು.

"ಕೆಲವು ಜನರ ಬರವಿಗಾಗಿ ನಾನು ಕಾಯುತ್ತಿದ್ದೇನೆ," ಎಂದು ನಾನು ಹೇಳಿದರೆ ಜನರು ಅಚ್ಚರಿ ಪಡುತ್ತಾರೆ. ಅವರೊಂದಿಗೆ ಗಂಟೆಗಟ್ಟಲೆ ಸಮಯ ಕಳೆಯಲು ಇಚ್ಛಿಸುತ್ತೇನೆ. ಪಡೆದುಕೊಳ್ಳಲು ಮತ್ತು ಕೇಳಿಸಿಕೊಳ್ಳಲು ಅವರಲ್ಲಿ ಎಷ್ಟೊಂದು ಆಸೆ ಇದೆ. ನಾನು ನನ್ನ ಅಧ್ಯಾತ್ಮ ಹೃದಯವನ್ನು ತೆರೆದಿಟ್ಟಾಗ ಆನಂದ, ಸಾರ್ಥಕತೆ ಮತ್ತು ನೆಮ್ಮದಿಯನ್ನು ಅನುಭವಿಸುತ್ತೇನೆ. ಅವರಲ್ಲಿ ಋಷಿಗಳ ಬೆಳಕು ಪ್ರಕಾಶಿಸುವುದನ್ನು ಕಾಣುತ್ತೇನೆ.

ಕೊನೆಯದಾಗಿ, ನಾನು ಯಾವಾಗಲೂ ಯಾರನ್ನೇ ಆದರೂ ಭೇಟಿ ಮಾಡುತ್ತೇನೆ. ಅದು ನನ್ನ ಕೆಲಸ. ಭೇಟಿ ಮಾಡುವುದು, ಕೇಳಿಸಿಕೊಳ್ಳುವುದು, ಸಾಂತ್ವನ ಹೇಳುವುದು, ಮಾರ್ಗದರ್ಶಿಸುವುದು, ಕಲಿಸುವುದು.... ಅಥವಾ ಸುಮ್ಮನೆ ಆಲಿಸುವುದು ಮತ್ತು ಅಳಲು ನನ್ನ ಭುಜಗಳನ್ನು ಕೊಡುವುದು. ಈ ಮಂದಿರದ ದ್ವಾರಗಳನ್ನು ಸದಾ ತೆರೆದಿಟ್ಟಿರಬೇಕು ಎಂಬುದನ್ನು ನನ್ನ ಸುತ್ತಲಿನ ಜನರು ಅರ್ಥಮಾಡಿಕೊಳ್ಳಬೇಕು.

ನಮ್ಮ ಭಾವನೆಗಳು ಮತ್ತು ಆಲೋಚನೆಗಳು ನಮ್ಮನ್ನು ಮುಕ್ತಿಗೆ ಸಿದ್ಧಗೊಳಿಸುತ್ತವೆ ಎಂಬುದನ್ನು ನಾವು ಸರಿಯಾಗಿ ತಿಳಿದುಕೊಂಡಿಲ್ಲ. ಪ್ರತಿಯೊಂದು ಭಾವನೆ ಮತ್ತು ಪ್ರತಿಯೊಂದು ಆಲೋಚನೆ ನಮ್ಮ ಕರ್ಮದ ಭಾರವನ್ನು ಹೆಚ್ಚಿಸುತ್ತವೆ ಅಥವಾ ಕಡಿಮೆ ಮಾಡುತ್ತವೆ. ಮುಕ್ತಿ ಅಲ್ಲೆಲ್ಲೋ ಸಿಗುವುದಲ್ಲ. ಅದನ್ನು ಪ್ರತಿ ಸಕಾರಾತ್ಮಕ ಭಾವನೆ ಮತ್ತು ಆಲೋಚನೆಯ ಮೂಲಕ ಪಡೆಯಬಹುದು. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫ್ಲೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ

ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ

ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ,
ಬನಶಂಕರಿ 2ನೇ ಹಂತ

### ಆನೇಕಲ್‌ನಲ್ಲಿ

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)
ಸಪ್ತರ್ಷಿ ಧ್ಯಾನ ಕೇಂದ್ರ, ರಾಜರಾಜೇಶ್ವರಿ ಬಡಾವಣೆ

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು 'Manasa Light Age Foundation' ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ತಪೋನಗರದಲ್ಲಿ ನಡೆದ ನಿವಾಸಿಗಳ ಕೂಟ

### ಸುದ್ದಿ-ಸೂಚನೆಗಳು

- ಗುರೂಜಿಯವರ 80ನೇ ಜನ್ಮೋತ್ಸವವನ್ನು 19-05-2019ರಂದು ತಪೋನಗರದಲ್ಲಿ ಆಚರಿಸಲಾಗುತ್ತದೆ. ಅದರಲ್ಲಿ ಭಾಗವಹಿಸಲು, ಸಾಧಕರು 18-05-2019ರ ಒಳಗೆ ಮಾನಸ ಕಛೇರಿಯಲ್ಲಿ ತಮ್ಮ ಹೆಸರನ್ನು ನೊಂದಾಯಿಸಬೇಕೆಂದು ವಿನಂತಿ.
- 15-04-2019ರಂದು ಆನೇಕಲ್ಲಿನ ನಮ್ಮ ಸಪ್ತರ್ಷಿ ಧ್ಯಾನ ಕೇಂದ್ರದ ಹನ್ನೊಂದನೇ ವಾರ್ಷಿಕೋತ್ಸವವನ್ನು ಆಚರಿಸಲಾಯಿತು.
- ದಿನಾಂಕ 01-05-2019, ಬುಧವಾರದಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ತಪೋನಗರದಲ್ಲಿ ಓರಿಯಂಟೇಶನ್ ತರಗತಿಯನ್ನು ಆಯೋಜಿಸಲಾಗಿದೆ. ವೆಬ್‌ಕಾಸ್ಟ್ ವ್ಯವಸ್ಥೆಯನ್ನು ಹೊಂದಿರುವ ದೂರಕಲಿಕೆಯ ಸಾಧಕರು ಕೂಡಾ ನೇರಪ್ರಸಾರದ ಮೂಲಕ ಇದರಲ್ಲಿ ಭಾಗವಹಿಸಬಹುದು. ಆಸಕ್ತರು ದಿನಾಂಕ 29-04-2019ರ ಒಳಗೆ ಮಾನಸ ಆಫೀಸನ್ನು ಸಂಪರ್ಕಿಸಿ ತಮ್ಮ ಹೆಸರನ್ನು ನೊಂದಾಯಿಸಬೇಕಾಗಿ ವಿನಂತಿ.

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು : ಬೆಳಿಗ್ಗೆ 11 ರಿಂದ 12<br>ಲೈಟ್ ಚಾನಲಿಂಗ್: ಮಧ್ಯಾಹ್ನ 12 ರಿಂದ 1 |
| 12-05-2019 | ಮಧ್ಯಾಹ್ನ 2ಕ್ಕೆ ಶಂಬಲ ಗ್ರೂಪ್ ಸಂಧಿಸುತ್ತದೆ |
| 19-05-2019 | ಗುರೂಜಿಯವರ ಜನ್ಮೋತ್ಸವದ ಕಾರ್ಯಕ್ರಮ<br>ಮಧ್ಯಾಹ್ನ 2ಕ್ಕೆ ರಾ ಗ್ರೂಪ್ ಸಂಧಿಸುತ್ತದೆ |

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 03 | ಶುಕ್ರ | ಮಾಸ ಶಿವರಾತ್ರಿ |
| 04 | ಶನಿ | ಅಮಾವಾಸ್ಯ |
| 07 | ಮಂಗಳ | ಅಕ್ಷಯ ತೃತೀಯ |
| 12 | ಭಾನು | ಶುಕ್ಲ ಅಷ್ಟಮಿ |
| 14 | ಮಂಗಳ | ಶುಕ್ಲ ದಶಮಿ |
| 18 | ಶನಿ | ಗುರೂಜಿಯವರ ಹುಟ್ಟುಹಬ್ಬದ ವಾರ್ಷಿಕೋತ್ಸವ<br>ಬುದ್ಧ ಪೂರ್ಣಿಮ |
| 19 | ಭಾನು | ಗುರೂಜಿಯವರ ಹುಟ್ಟುಹಬ್ಬದ ವಾರ್ಷಿಕೋತ್ಸವ ಕಾರ್ಯಕ್ರಮ |
| 27 | ಸೋಮ | ಕೃಷ್ಣ ಅಷ್ಟಮಿ |

### ಗುರೂಜಿಯವರ ಹುಟ್ಟಿದ ದಿನದ ವಾರ್ಷಿಕೋತ್ಸವ ಕಾರ್ಯಕ್ರಮ ಭಾನುವಾರ, 19-05-2019

| | |
|---|---|
| ಬೆಳಿಗ್ಗೆ 11 ಕ್ಕೆ | ಸ್ವಾಗತ<br>ಭಾಷಣಗಳು<br>ವಿಶೇಷ ಧ್ಯಾನ |
| ಮಧ್ಯಾಹ್ನ 12.30ಕ್ಕೆ | ಪ್ರಸಾದ |

### ಆನೇಕಲ್ ಕಾರ್ಯಕ್ರಮ

ಆನೇಕಲ್‌ನಲ್ಲಿರುವ ನಮ್ಮ 'ಸಪ್ತರ್ಷಿ ಧ್ಯಾನ ಕೇಂದ್ರ'ದಲ್ಲಿ ದಿನಾಂಕ 18-05-2019 ರಂದು ಬೆಳಿಗ್ಗೆ 11.30ಕ್ಕೆ ಗುರೂಜಿಯವರ ಹುಟ್ಟುಹಬ್ಬದ ವಾರ್ಷಿಕೋತ್ಸವವನ್ನು ಆಚರಿಸಲಾಗುತ್ತದೆ.

ಗುರೂಜಿಯವರ ಬ್ಲಾಗ್ ಓದಲು ಮತ್ತು ಅವರ ವಿಡಿಯೋಗಳನ್ನು ನೋಡಲು www.speakingtree.in ವೆಬ್‌ಸೈಟ್‌ಗೆ ಭೇಟಿ ನೀಡಿ.

ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ-ಮೇಲ್ ಮುಖಾಂತರ ಮಾನಸ ಆಫೀಸ್‌ಅನ್ನು ಸಂಪರ್ಕಿಸಿ.

## ಪ್ರವೇಶ ದ್ವಾರ

**ವೈಶಾಲಿ ಜೋಷಿ; ಅನು: ಸುಜಾತ ವಿ**

ನಮ್ಮನ್ನು ಕತ್ತಲಿನಿಂದ ಬೆಳಕಿಗೆ, ಅಜ್ಞಾನದಿಂದ ಜ್ಞಾನಕ್ಕೆ, ಬಂಧನದಿಂದ ಸ್ವಾತಂತ್ರ್ಯಕ್ಕೆ ಕರೆದುಕೊಂಡು ಹೋಗುವವರೇ ಗುರು. ದೇವರು ಅವನ ಕೃಪೆಯ ವೃಷ್ಟಿ ಸುರಿಸುತ್ತಾನೆ ಮತ್ತು ಸತ್ಯದ ಅನ್ವೇಷಕರಿಗೆ ಮಾರ್ಗದರ್ಶನ ನೀಡಲು ಶಾರೀರಿಕವಾಗಿ ಪ್ರಕಟಗೊಳ್ಳುತ್ತಾನೆ. ನಮಗೆ, ಅದು ನಮ್ಮ ಗುರೂಜಿ. ಅವರು ದೈವೀ ಮತ್ತು ಮಾನವ ಲೋಕಗಳ ನಡುವಿನ ಸಂಪರ್ಕದ ಕೊಂಡಿ. ಅವರಿಗೆ ಎರಡೂ ಸ್ತರಗಳ ಸಂಪರ್ಕವಿದ್ದುದರಿಂದ, ನಾವು ಪ್ರವೇಶ ದ್ವಾರವನ್ನು ತಲುಪಿ ಅದರೊಳಗೆ ಪ್ರವೇಶಿಸುವುದಕ್ಕಾಗಿ ನಮ್ಮನ್ನು ಆಧ್ಯಾತ್ಮಿಕವಾಗಿ ಮೇಲಕ್ಕೆತ್ತಲು ಪ್ರಯತ್ನಿಸಿದರು.

ಇದಕ್ಕಾಗಿ ಅವರು ನಮ್ಮ ಮಟ್ಟಕ್ಕೆ ಇಳಿದುಬಂದು ನಮ್ಮನ್ನು ನಯವಾಗಿ ಈ ಮಾರ್ಗದಲ್ಲಿ ಮುನ್ನಡೆಸಿದರು. ಧ್ಯಾನವನ್ನು ಕಲಿಸುತ್ತಾ; ವಿರೂಪವಿಲ್ಲದ ಜ್ಞಾನವನ್ನು ತಮ್ಮ ಗುರುಗಳಾದ ಮಹರ್ಷಿ ಅಮರರವರಿಂದ ಮತ್ತು ಋಷಿಗಳಿಂದ ಕೆಳತರುತ್ತಾ; ಧ್ಯಾನ ಮಾಡುವುದಕ್ಕೆ ಮತ್ತು ಗುಣಾತ್ಮಕರಾಗುವುದಕ್ಕೆ, ನಮ್ಮ ನೈಜ ಸ್ವಭಾವವಾದ ಪ್ರೀತಿಯನ್ನು ಪ್ರಕಟಗೊಳಿಸುವುದಕ್ಕೆ ಮತ್ತು ಆಧ್ಯಾತ್ಮಿಕ ಹಾಗು ಲೌಕಿಕ ಜೀವನಗಳೆರಡರಲ್ಲೂ ಸರಿಯಾದ ಸಮತೋಲನವನ್ನು ಕಂಡುಕೊಳ್ಳುವುದಕ್ಕೆ ಮಹತ್ವ ನೀಡುತ್ತಾ; ನಮ್ಮನ್ನು ಮುನ್ನಡೆಸಿದರು. ನಮ್ಮ ಆಧ್ಯಾತ್ಮಿಕ ಬೆಳವಣಿಗೆಯ ಹಾದಿಯಲ್ಲಿ ಬಂದ ಸಮಸ್ಯೆಗಳನ್ನು ಮತ್ತು ಅಡಚಣೆಗಳನ್ನು ಅವರು ತೊಡೆದು ಹಾಕಿದರು ಮತ್ತು ಲೌಕಿಕ ಪ್ರಪಂಚದ ಪ್ರಲೋಭನೆಗಳು ಮತ್ತು ಪ್ರತಿಕೂಲ ಶಕ್ತಿಗಳ ವಿರುದ್ಧ ನಮಗೆ ರಕ್ಷಣೆ ನೀಡಿದರು.

ಅವರು ನಮ್ಮ ಪ್ರತಿದಿನದ ಜೀವನದಲ್ಲಿ ಬೆಳಕನ್ನು ತುಂಬಿದರು, ನಮಗೆ ಲೈಟ್ ಚಾನಲಿಂಗ್ ಕಲಿಸಿ ಕೊಟ್ಟರು, ಮತ್ತು ದೇವರನ್ನು ಸಂಪರ್ಕಿಸಲು ಮತ್ತು ದೇವರನ್ನು ಅನುಭವಿಸಲು ಉನ್ನತ ಮಾರ್ಗವನ್ನು ತೋರಿಸಿದರು. ಸಮಸ್ತ ಸೃಷ್ಟಿಯಲ್ಲಿ ದೇವರನ್ನು ಅವಲೋಕಿಸುವುದಕ್ಕೆ ಭೌತಿಕ ಮಟ್ಟದಲ್ಲಿ ಹೊಸ ದೃಷ್ಟಿ ಕೋನವನ್ನು ಅವರು ನಮಗೆ ಕೊಟ್ಟರು. ತನ್ನ ಇಡೀ ಸೃಷ್ಟಿಯಲ್ಲಿ ದೇವರು ವ್ಯಾಪಿಸಿರುವುದರಿಂದ, ಪ್ರಕೃತಿ, ಸೂರ್ಯೋದಯ, ಚಂದ್ರೋದಯ, ಇತ್ಯಾದಿಗಳನ್ನು ಆನಂದಿಸಲು ಅವರು ನಮಗೆ ಹೇಳಿದರು ಮತ್ತು ನಮ್ಮ ಸುತ್ತಲಿನ ಸಜೀವ ಮತ್ತು ನಿರ್ಜೀವ ವಸ್ತುಗಳ ಜೊತೆ ಸಂಪರ್ಕವೇರ್ಪಡಿಸಿಕೊಂಡು ಅವುಗಳಲ್ಲಿರುವ ದೇವರನ್ನು ಅನುಭವಿಸಬೇಕೆಂದು ಹೇಳಿದರು. ಜೀವನದಲ್ಲಿ ಎಲ್ಲವನ್ನೂ ಅನುಭವಿಸುವ ಮೂಲಕ ಜೀವನವನ್ನು ಸಂಭ್ರಮಿಸಬೇಕೆಂದು ಒತ್ತಿ ಹೇಳಿದರು. ನಮ್ಮನ್ನು ಉನ್ನತ ಮಟ್ಟಕ್ಕೇರಿಸುವ ಮತ್ತು ನಮ್ಮ ಭಾವನೆಗಳು, ಆಲೋಚನೆಗಳು ಮತ್ತು ನಮ್ಮ ವ್ಯಕ್ತಿತ್ವವನ್ನು ಪರಿಷ್ಕರಿಸಲು ಸಹಾಯ ಮಾಡುವಂತಹ ಪುಸ್ತಕಗಳನ್ನು ಓದಿ, ಸಂಗೀತವನ್ನು ಆಲಿಸಿ, ಒಳ್ಳೆಯ ಚಲನ ಚಿತ್ರಗಳನ್ನು ವೀಕ್ಷಿಸಿ, ಎಂದು ಅವರು ನಮಗೆ ಹೇಳುತ್ತಿದ್ದರು.

ಭೌತಿಕವಾಗಿ ಅವರು ನಮ್ಮ ಜೊತೆ ಇಲ್ಲದಿದ್ದರೂ, ನಮಗೆ ಸತ್ಯದೆಡೆಗಿನ ಮತ್ತು ದೇವರೆಡೆಗಿನ ಪ್ರವೇಶ ದ್ವಾರವಾಗಿ ಗುರೂಜಿಯವರು ಮುಂದುವರಿಯುತ್ತಿದ್ದಾರೆ. ಈ ಪ್ರವೇಶ ದ್ವಾರದೊಳಗೆ ಪ್ರವೇಶಿಸಿ ದೈವವನ್ನು ತಲುಪಲು, ನಮ್ಮ ಭಾಗದಿಂದ, ಆಂತರಿಕ ಮತ್ತು ಬಾಹ್ಯ ಮಟ್ಟಗಳೆರಡರಲ್ಲೂ ಸಾಧನೆ ಮಾಡುವ ಮೂಲಕ ನಾವು ಪ್ರಯತ್ನ ಮಾಡಬೇಕು. ■

## ವರ್ಣನಾತೀತರ ವರ್ಣನೆ

**ಶ್ರುತಿ ಸುಧಾಕರ್; ಅನು: ಪಾಂಡುರಂಗ**

ನಮ್ಮ ಗುರು ಗುರೂಜಿ ಕೃಷ್ಣಾನಂದರವರ ಉಪಸ್ಥಿತಿಯಲ್ಲಿ ಕಳೆದ ಆ ಹಿಂದಿನ ದಿನಗಳನ್ನು ನೆನಪಿಸಿಕೊಂಡಾಗ, ಅವರ ಹೆಸರೇ ಸೂಚಿಸುವ ಹಾಗೆ ಅವರ ಉಪಸ್ಥಿತಿ ದೈವೀಕತೆಯಿಂದ ಕೂಡಿರುತ್ತಿತ್ತು ಮತ್ತು ಆನಂದದಾಯಕವಾಗಿರುತ್ತಿತ್ತು.

ಮಗುವಿನ ಕೋಮಲತೆ, ಅಮ್ಮನ ಬೇಷರತ್ ಪ್ರೀತಿ, ಅಪ್ಪನ ಕಾಳಜಿ ಮತ್ತು ಆರೈಕೆ ಮತ್ತು ಆತ್ಮೀಯ ಸ್ನೇಹಿತರಂತೆ ಅರ್ಥ ಮಾಡುಕೊಳ್ಳುವ ಸ್ವಭಾವ, ಅವರಲ್ಲಿತ್ತು. ಅವರು ಒಬ್ಬ ಪರಿಪೂರ್ಣ ಟೀಚರ್ ಹಾಗೂ ಪರಿಪೂರ್ಣ ಗುರು ಆಗಿದ್ದರು. ಅವರಲ್ಲಿ ಅಗಾಧ ಸಾಮರ್ಥ್ಯ ಮತ್ತು ವಿವೇಕವಿತ್ತು. ಅವರು ಅಪಾರ ಸಹನೆಯಿಂದ ಜನರಿಗೆ ಆಧ್ಯಾತ್ಮಿಕ ಜಾಗೃತಿಯನ್ನು ಪಡೆದು ಮುಂದುವರಿಯಲು ಮಾರ್ಗದರ್ಶಿಸುತ್ತಿದ್ದರು. ಅವರ ಜೀವನವನ್ನು 'ನಿಸ್ವಾರ್ಥ ಸೇವೆ' ಎಂಬ ಎರಡು ಪದಗಳಿಂದ ವರ್ಣಿಸಬಹುದು. ಅವರು ಬೋಧಿಸಿದ ಪ್ರಮುಖ ಅಂಶಗಳೆಂದರೆ –ಪ್ರೀತಿ, ಸ್ವಾತಂತ್ರ್ಯ ಮತ್ತು ಪರಿವರ್ತನೆ.

ಉತ್ಸಾಹ ಕಳೆದುಕೊಂಡವರಲ್ಲಿ ಮತ್ತೆ ಭರವಸೆ ಮೂಡಿಸುವಂತಹ ಸಾಮರ್ಥ್ಯ ಅವರ ನಗುವಿನಲ್ಲಿತ್ತು. ಅದು ಪ್ರತಿಯೊಬ್ಬರಿಗೂ ದಿನಪೂರ್ತಿ ಉತ್ಸಾಹವನ್ನು ತುಂಬುತ್ತಿತ್ತು. ಅವರ ಮಾತುಗಳು ನಮಗೆ, ಜೀವ ಶಕ್ತಿ, ಕಷ್ಟದ ಸಮಯಗಳಲ್ಲಿ ನಾವು ಮುನ್ನಡೆಯಲು ಬೇಕಾದ ಭರವಸೆ ಮತ್ತು ಆಧ್ಯಾತ್ಮಿಕ ಶಕ್ತಿಯನ್ನು ತಂದು ಕೊಡುತ್ತಿದ್ದವು. ಅವರ ನಡತೆ ಯಾವಾಗಲೂ ಅಪ್ಯಾಯಮಾನವಾಗಿರುತ್ತಿತ್ತು. ಅವರ ನಡಿಗೆ ಗಂಭೀರವಾಗಿದ್ದರೂ ಅದರಲ್ಲಿ ನಮ್ರತೆ ಇರುತ್ತಿತ್ತು. ಅವರು ಸ್ವತಃ ಕಣ್ವ ಮಹರ್ಷಿ ಆಗಿದ್ದರು ಎಂದು ನಮಗೆ ತಿಳಿದಿದೆ. ಅವರ ಹಿರಿಮೆಗಳು ಬಹಳವಿದ್ದರೂ ಅವರೆಂದೂ ಹೆಚ್ಚುಗಾರಿಕೆಯನ್ನು ತೋರಿಸಿಕೊಳ್ಳುತ್ತಿರಲಿಲ್ಲ. ನಮ್ಮ ಜೊತೆ ಇದ್ದಾಗಲೆಲ್ಲಾ ಅವರು ಯಾವಾಗಲೂ ಪ್ರೀತಿ ಮತ್ತು ಬೆಳಕನ್ನು ಹೊರ ಹೊಮ್ಮಿಸುತ್ತಿದ್ದುರಿಂದ, ನಮಗೆ ನಾವು ಸಹ ಉನ್ನತ ಮಟ್ಟಕ್ಕೆ ಏರಿದ ಅನುಭವವಾಗುತ್ತಿತ್ತು, ಅವರ ಪ್ರೀತಿಯನ್ನು ಮತ್ತು ಅಂಗೀಕೃತಿಯನ್ನು ಪಡೆದ ಅನುಭವವಾಗುತ್ತಿತ್ತು.

ಅವರು ನಮಗೆ ದೈವದ ಸಾಕಾರ ಮೂರ್ತಿಯಾಗಿದ್ದರು. ಅನೇಕ ಜನರು ಅವರ ದರ್ಶನವನ್ನು ಪಡೆಯಲು ಕಾಯುತ್ತಿದ್ದರು! ಅವರ ವಿದ್ಯಾರ್ಥಿಗಳಾದ ನಮಗೆ ಅವರ ಮಾರ್ಗದರ್ಶನದಲ್ಲಿಯೇ ಬೆಳೆಯುವ ವಿಶೇಷ ಸೌಲಭ್ಯವಿತ್ತು. ಚೈತನ್ಯಗಳು, ಪುಸ್ತಕಗಳು ಮತ್ತು ಧ್ವನಿ ಮುದ್ರಿತ ಉಪನ್ಯಾಸ ಮುಂತಾದವುಗಳ ರೂಪದಲ್ಲಿ, ನಮಗಾಗಿಯಷ್ಟೇ ಅಲ್ಲ ಮುಂದಿನ ಪೀಳಿಗೆಯವರಿಗಾಗಿಯೂ, ಅವರು ಹಿಂದೆ ಬಿಟ್ಟು ಹೋಗಿರುವ ಅಗಾಧ ಜ್ಞಾನದ ತಳಹದಿಯ ಮೂಲಕ ಅವರನ್ನು ಮತ್ತು ಅವರ ಬೋಧನೆಗಳನ್ನು ಅರ್ಥಮಾಡಿಕೊಳ್ಳುವ ವಿಶೇಷ ಸೌಲಭ್ಯದ ಕೃಪೆ ಹೊಸ ವಿದ್ಯಾರ್ಥಿಗಳಿಗೂ ಇದೆ. ಈಗಲೂ ಸೂಕ್ಷ್ಮ ಮಟ್ಟದ ಮೂಲಕ ನಮ್ಮೆಲ್ಲರನ್ನೂ ಮಾರ್ಗದರ್ಶಿಸುವುದರ ಜೊತೆಗೆ, ಮಾನಸ ಫೌಂಡೇಷನ್‌ನಲ್ಲಿನ ಆಯ್ಕೆಗೊಂಡಿರುವ ಹಿರಿಯ ಮಾರ್ಗದರ್ಶಿಗಳು ಮತ್ತು ಶಿಕ್ಷಕರುಗಳ ಮೂಲಕ ಗುರೂಜಿ ಮಾರ್ಗದರ್ಶಿಸುವುದನ್ನು ಮುಂದುವರೆಸುತ್ತಿದ್ದಾರೆ.

ವಿಶೇಷ ಸೌಲಭ್ಯಗಳ ಜೊತೆಯಲ್ಲಿ ಜವಾಬ್ದಾರಿಯೂ ಬರುತ್ತದೆ: ಗುರೂಜಿಯವರನ್ನು ಅರ್ಥ ಮಾಡಿಕೊಂಡಿರುವ ನಮಗೆ ಅವರ ಈ ಹುಟ್ಟು ಹಬ್ಬದ ವಾರ್ಷಿಕ ದಿನೋತ್ಸವವು ಅವರಂತೆಯೇ ನಾವಾಗುವ ಸಂಕಲ್ಪ ಮಾಡಲು ಮತ್ತೊಂದು ಅವಕಾಶವಾಗಿದೆ! ■

## ಲೈಟ್ ಚಾನಲ್ಸ್

**ವಿಶ್ವ ಸಂಚಲನ**

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡುವುದು.

# ಗುರೂಜಿಯವರ ನುಡಿಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

ಡಿಸೆಂಬರ್ 2005 (ಮುಂದುವರೆದ ಭಾಗ)

ನಾನು ವ್ಯಕ್ತಿಯೊಬ್ಬರನ್ನು ಹೀಲ್ ಮಾಡುತ್ತಿದ್ದಾಗ ಋಷಿಗಳು ಒಂದು ವಿಷಯವನ್ನು ಹೇಳಿದರು. ಅವರು ಒಂದು ಬಹಳ ಸೂಕ್ಷ್ಮವಾದ ಮತ್ತು ಉತ್ತಮ ವಿಷಯವೊಂದನ್ನು ವಿವರಿಸಿದರು.

ಕರ್ಮಗಳ ನಿಯಮಗಳು ಅನೇಕವಿವೆ. ಅವುಗಳಲ್ಲಿ ಕೆಲವು ನಮಗೆ ತಿಳಿದಿವೆ ಮತ್ತು ಬಹಳಷ್ಟು ನಮಗೆ ತಿಳಿದಿಲ್ಲ. ಅನೇಕ ಅಧ್ಯಾತ್ಮಿಕ ನಿಯಮಗಳೂ ಇವೆ. ಕೆಲವು ನಮಗೆ ತಿಳಿದಿವೆ ಮತ್ತು ಅನೇಕ ನಿಯಮಗಳು ನಮಗೆ ತಿಳಿದಿಲ್ಲ. ಕಲಿಯುಗದಲ್ಲಿ ಕಾಲದ ತುಳಿತಕ್ಕೆ ಸಿಲುಕಿರುವಾಗ, ನಾಮಸ್ಮರಣೆಯೊಂದೇ ಸಾಕೆಂದು ಋಷಿಗಳು ಹೇಳಿದರು. ಈಗ ಎಲ್ಲಾ ನಿಯಮಗಳೂ ಆಚರಣೆಗೆ ಬರುತ್ತವೆ; ನಮಗೀಗ ಅನೇಕ ನಿಯಮಗಳು ಅನ್ವಯಿಸುತ್ತವೆ. ನಾವು ಬೇರೆಯವರ ಕರ್ಮಗಳಲ್ಲಿ ಮಧ್ಯ ಪ್ರವೇಶಿಸಬಾರದು. ವ್ಯಕ್ತಿಯೊಬ್ಬರ ಬಗ್ಗೆ ಯೋಚಿಸಿದರೆ ಸಾಕು ಅವರ ಸಂಪರ್ಕ ಕೊಂಡಿಯನ್ನು(link) ಪ್ರವೇಶಿಸುತ್ತೇವೆ. ಈ ಕೊಂಡಿ ಬರೀ ಕೊಂಡಿಯಷ್ಟೇ ಅಲ್ಲ. ಇದೊಂದು ಸಕಾರಾತ್ಮಕ ಮಾರ್ಗ. ಅವರ ಚೈತನ್ಯಗಳು ಮತ್ತು ಆಲೋಚನೆಗಳನ್ನು ಪಡೆಯುತ್ತೇವೆ. ಕೆಲವೊಮ್ಮೆ ಅವರ ಕರ್ಮಗಳನ್ನು ಪಡೆಯುತ್ತೇವೆ. ಇದು ಬಹಳ ಮುಖ್ಯವಾದ್ದರಿಂದ ನಾವೆಲ್ಲರೂ ಇದನ್ನು ನೆನಪಿಡಬೇಕು. ವ್ಯಕ್ತಿಯೊಬ್ಬರ ಬಗ್ಗೆ ಯೋಚಿಸಿದಾಗ ಅನೇಕ ಕರ್ಮಗಳನ್ನು ಪಡೆಯುತ್ತೇವೆ. ನಾವು ಸಲಹೆ ನೀಡಲಾರಂಭಿಸಿದಾಗ, ಅವರ ಬಗ್ಗೆ ಮಾತನಾಡಲಾರಂಭಿಸಿದಾಗ, ಗಾಸಿಪ್ ಮಾಡಿದಾಗ, ಮಧ್ಯ ಪ್ರವೇಶಿಸಿದಾಗ, ನಮಗೇ ತಿಳಿಯದಂತೆ ಅವರ ಕರ್ಮಗಳನ್ನು ಪಡೆಯುತ್ತೇವೆ. ನಮಗಿದು ಅರ್ಥವಾಗಿರಲಿ ಅಥವ ಆಗಿಲ್ಲದಿರಲಿ ಋಷಿಗಳು ಯಾವಾಗಲೂ ಹೀಲ್ ಮಾಡುತ್ತಾರೆ ಮತ್ತು ಸಹಾಯಮಾಡುತ್ತಾರೆ. ನಮ್ಮ ಭಾಗದಿಂದ, ಧ್ಯಾನ ಮಾಡಿದ ನಂತರವಷ್ಟೇ ಲಿಂಕ್ ಮಾಡಲು ಪ್ರಯತ್ನಿಸುವುದು ಉತ್ತಮ. ಅದು ಭೌತಿಕ ಮಟ್ಟದಲ್ಲೂ ಪರಿಣಾಮ ಬೀರುತ್ತದೆಯೇ? ಇಲ್ಲ. ಆದರೆ ನಾವು ಸಂಪರ್ಕಗೊಂಡು ಅವರ ಬಗ್ಗೆ ನಕಾರಾತ್ಮಕ ಆಲೋಚನೆಯನ್ನು ಹೊಂದಿದ್ದರೆ, ಆಗ ಅದು ಅವರಿಗೆ ಭೌತಿಕ ಮಟ್ಟದಲ್ಲೂ ತೊಂದರೆ ಮಾಡುತ್ತದೆ. ನಾವು ಅವರ ಬಗ್ಗೆ ತುಂಬಾ ನಕಾರಾತ್ಮಕವಾಗಿ ಯೋಚಿಸುವುದರಿಂದಾಗಿ ಅದು ಹೇಗೋ ಅವರು ಉದ್ವಿಗ್ನರಾಗುತ್ತಾರೆ, ಗೊಂದಲಕ್ಕೊಳಗಾಗುತ್ತಾರೆ. ಆದ್ದರಿಂದಲೇ ಲಿಂಕ್ ಮಾಡಲು ಧ್ಯಾನದ ನಂತರದ ಸಮಯ ಅತ್ಯುತ್ತಮವೆಂದು ನಾನು ಹೇಳುವುದು.

ನಾವು ಮತ್ತೊಂದು ವರ್ಷಕ್ಕೆ ಕಾಲಿಡುತ್ತಿದ್ದೇವೆ. ಗ್ರೀಟಿಂಗ್ ಕಾರ್ಡ್‌ಗಳನ್ನು ಕಳಿಸೋಣವೆಂದು ಯೋಚಿಸುವಷ್ಟರಲ್ಲೇ ವರ್ಷ ಮುಗಿದು ಹೊಸ ವರ್ಷ ಕಾಯುತ್ತಿರುತ್ತದೆ. ಪ್ರಳಯ ಪ್ರಕ್ರಿಯೆಗಳು ತೀವ್ರಗೊಳ್ಳುತ್ತಿವೆ. ನಮಗೆ ರಕ್ಷಣೆಯಿರುವುದರಿಂದಾಗಿ ಅದರ ಪ್ರಭಾವ ಹೆಚ್ಚಾಗಿ ಇಲ್ಲ. ನಾವು ಎಚ್ಚರಿಕೆಯಿಂದಿರಬೇಕು. ಆದರೆ ಇನ್ನು ಮುಂದೆ, ಒಂದು ಸಮಯದ ನಂತರ ನಿಮ್ಮ ಸಮಸ್ಯೆಗಳನ್ನು ನೀವೇ ಎದುರಿಸಬೇಕು. ಮಗುವಿಗೆ ಎಷ್ಟು ಕಾಲ ನಡೆಯಲು ಕಲಿಸಲಾಗುತ್ತದೆ? ಒಂದು ದಿನ ನೀವೇ ಸ್ವಾವಲಂಬಿಯಾಗಬೇಕು. ನಿಮ್ಮಲ್ಲಿ ಪ್ರತಿಯೊಬ್ಬರೂ ಪ್ರತ್ಯೇಕ ಬೆಳಕುಗಳಾಗಬೇಕು. ಋಷಿಯಾಗಬೇಕು. ನಮ್ಮ ಸಮಸ್ಯೆಗಳನ್ನು ನಾವೇ ಎದುರಿಸಲು ತರಬೇತಿ ಪಡೆಯೋಣ. ನಾವು ಹೆಚ್ಚು ಎಚ್ಚರಿಕೆಯಿಂದಿರೋಣ. ಆದರೆ ಭಯಪಟ್ಟುಕೊಳ್ಳುವುದು ಬೇಡ. ನಾನಿಲ್ಲಿರುವುದು ನಿಮಗೆ ಎಚ್ಚರಿಕೆ ಕೊಡುವುದಕ್ಕಾಗಿ. ನಮ್ಮ ಅಹಂಗಳಿಂದ ದೂರವಾಗೋಣ. ಅದು ಬಹಳ ಮುಖ್ಯ. 'ನಾನು ಬಹಳ ನೀತಿವಂತ,' ಎಂದು ಅಹಂ ಹೇಳುತ್ತದೆ. ಆದರೆ ನಮ್ಮ ವಿಚಾರಗಳು ಅವಿವೇಕಿ ವಿಚಾರಗಳಾಗಿದ್ದು ನಮ್ಮ ಬದುಕು ವ್ಯರ್ಥವಾಯಿತೆಂದು ಹತ್ತು ವರ್ಷಗಳ ನಂತರ ನಮಗೆ ಅನ್ನಿಸಬಾರದು. ನಾವು ಶಾಂತಿಯಿಂದ ಬದುಕೋಣ ಮತ್ತು ಇತರರನ್ನೂ ಶಾಂತಿಯಿಂದ ಬದುಕಲು ಬಿಡೋಣ.

ಜೀವನವನ್ನು ಒಪ್ಪಿಕೊಳ್ಳುವುದರಲ್ಲಿ ಎರಡು ಭಾಗಗಳಿವೆ. ಮೊದಲನೆಯ ಭಾಗವೆಂದರೆ, ಒಳ್ಳೆಯದೋ ಕೆಟ್ಟದೋ, ದೇವರು ಕೊಟ್ಟಿದ್ದನ್ನು ನಾವು ಸ್ವೀಕರಿಸುತ್ತೇವೆ. ಆದರೆ ಒಪ್ಪಿಕೊಂಡು ನಾವು ಸುಮ್ಮನೇ ಕೂರುವುದಿಲ್ಲ. ಅದು ಎರಡನೆಯ ಭಾಗ. ನಾವು ಒಪ್ಪಿಕೊಂಡಾಗ ದೂರುವುದಿಲ್ಲ. ಇದು, ಕಷ್ಟಗಳನ್ನು ನಿವಾರಿಸಿಕೊಳ್ಳಲು ನಾವು ಮಾಡುವ ಪ್ರಯತ್ನಗಳಿಗೆ ಅಡ್ಡಿ ಬರುವುದಿಲ್ಲ. ನಾವು ಒಪ್ಪಿಕೊಳ್ಳಲು ಕಾರಣವೆಂದರೆ ನಾವು ದೇವರನ್ನು ಪ್ರೀತಿಸುತ್ತೇವೆ, ಅವನನ್ನು ನಂಬುತ್ತೇವೆ. ಅವಶ್ಯಕತೆ ಇಲ್ಲದಿದ್ದರೆ, ನಾವು ಬದುಕಿನ ಕಷ್ಟಗಳನ್ನು ಅನುಭವಿಸುವಂತೆ ಅವನು ಮಾಡುತ್ತಿರಲಿಲ್ಲ. ಆದ್ದರಿಂದ ನಾವು ಅವನನ್ನು ನಂಬಿ ಎಲ್ಲವನ್ನು ಒಪ್ಪಿಕೊಳ್ಳುತ್ತೇವೆ. ದೇವರು ನಮ್ಮ ಪಿತೃವಿದ್ದಂತೆ, ಅವನು ನಮ್ಮನ್ನು ನೋಡಿಕೊಳ್ಳುತ್ತಾನೆ.

'ಬೆಳಕಿನಲ್ಲಿ ಬದುಕುವುದು' ಪುಸ್ತಕವನ್ನು ಓದಿದ ಬಹುತೇಕ ಎಲ್ಲರೂ ಬಹಳವಾಗಿ ಪ್ರಭಾವಿತರಾಗುತ್ತಾರೆನ್ನುವುದರಲ್ಲಿ ಅನುಮಾನವಿಲ್ಲ. ಅವರೆಲ್ಲರೂ ನನ್ನನ್ನು ಭೇಟಿಯಾಗಲು ಪ್ರಯತ್ನಿಸುತ್ತಾರೆ. ಅವರಲ್ಲಿ ಅನೇಕರು ಕೂಡಲೇ ಅಥವ ನಂತರದಲ್ಲಿ ನನ್ನನ್ನು ಭೇಟಿ ಮಾಡುತ್ತಾರೆ. ಕುತೂಹಲದಿಂದ ನಾನು ಅವರನ್ನು ಯಾವಾಗಲೂ ಕೇಳುತ್ತೇನೆ, "ನಿಮಗೆ ಏನು ಪ್ರಭಾವ ಬೀರಿತು? ಪ್ರಭಾವ ಬೀರಿದ ಬಹು ಮುಖ್ಯವಾದ ಅಂಶ ಯಾವುದು?" ಜನರು ಸಾಮಾನ್ಯವಾಗಿ ಹೇಳುವುದು, ಸೂಕ್ಷ್ಮ ಪ್ರಪಂಚಗಳು, ಋಷಿಗಳು ಮತ್ತು ಅದರ ಯಕ್ಷಕಥೆಗಳಂತಹ ಭಾಗಗಳ ಬಗ್ಗೆ. ಆದರೆ ಕಳೆದ ವಾರ ಮಹಿಳೆಯೊಬ್ಬರು ಸೊಗಸಾಗಿ ಹೇಳಿದರು, 'ನಮ್ಮ ಏಳಿಗೆಗಾಗಿ ಎಷ್ಟೊಂದು ಜನ ಕೆಲಸ ಮಾಡುತ್ತಿದ್ದಾರೆ ಆದರೂ ನಮಗೆ ಅದರ ಬಗ್ಗೆ ಏನೂ ತಿಳಿದಿಲ್ಲವಲ್ಲ ಎಂದು ನನಗೆ ಆಶ್ಚರ್ಯವಾಗಿದೆ! ನಮಗಾಗಿ ಇಷ್ಟೊಂದು ಜನ ಕೆಲಸ ಮಾಡುತ್ತಿದ್ದರೂ ನಾವು ಹೀಗೇ ಇದ್ದೇವೆ, ನಾವು ಬದಲಾಗಿಲ್ಲ!" ಇದು ಸತ್ಯ. ವಾಸ್ತವದ ವಿಷಯವೆಂದರೆ ನಾವು ಬದಲಾಗಲು ನಿರ್ಧರಿಸದಿದ್ದರೆ ಬೇರೆ ಯಾರೂ ನಮ್ಮನ್ನು ಬದಲಾಯಿಸಲಾರರು, ದೇವರಿಗೂ ನಮ್ಮನ್ನು ಬದಲಾಯಿಸಲಾಗುವುದಿಲ್ಲ. ಆ ರೀತಿಯಲ್ಲಿ ನಾವು ದೇವರಿಗಿಂತಲೂ ಹೆಚ್ಚು ಶಕ್ತಿವಂತರು!! ಬದಲಾಗಲು ನಿರ್ಧರಿಸಿದರೆ ಖಂಡಿತವಾಗಿಯೂ ನಾವು ಬದಲಾಗುತ್ತೇವೆ.

ಭಜನೆ ಕೇಳಿದಾಗಲೆಲ್ಲಾ ನಾವು ಭಾವನಾತ್ಮಕವಾಗಿ ಉನ್ನತ ಮಟ್ಟಕ್ಕೇರುವುದನ್ನು ಗಮನಿಸಿದ್ದೇನೆ. ಭಜನೆ ಕಣ್ಣೀರು ತರಿಸುತ್ತದೆ ಮತ್ತು ನಾವು ದೇವರಿಗೆ ಹತ್ತಿರವಾದ ಭಾವನೆಯನ್ನುಂಟುಮಾಡುತ್ತದೆ. ಅತೀಂದ್ರಿಯ ಅನುಭವಗಳಾದಾಗಲೆಲ್ಲ ನಾವು ಆಧ್ಯಾತ್ಮಿಕವಾಗಿ ಔನ್ನತ್ಯಕ್ಕೇರಿದಂತೆ ಮತ್ತು ದೇವರಿಗೆ ಸಮೀಪವಾದಂತೆ ಭಾಸವಾಗುತ್ತದೆ. ಈ ಉನ್ನತಗೊಂಡ ಅನುಭವಗಳು ಕ್ಷಣಿಕ. ಅದು ಅಲೆಯ ಮೇಲೆ ಕುಳಿತಿರುವಂತೆ, ಅಲೆ ಮೇಲೇರುತ್ತದೆ ನಂತರ ಕೆಳಬರುತ್ತದೆ. ಈ ಅನುಭವಗಳಾದ ನಂತರ ಪುನಃ ನಮ್ಮ ಮಟ್ಟಕ್ಕೇ ಇಳಿದು ಬರುತ್ತೇವೆ. ಉನ್ನತಗೊಳ್ಳುವ ಈ ಕ್ಷಣಿಕ ಅನುಭವವನ್ನು ಶಾಶ್ವತವಾಗಿಸಿಕೊಳ್ಳಬೇಕು, ನಿರಂತರವಾಗಿಸಿಕೊಳ್ಳಬೇಕು. ದಿನದ 24 ಗಂಟೆಗಳೂ ನಾವು ಆನಂದದ ಸ್ಥಿತಿಯಲ್ಲಿರಬೇಕು, ಪ್ರೀತಿಯಿಂದ ತುಂಬಿರಬೇಕು. ಸದಾಕಾಲ ದೈವದೊಂದಿಗೆ ಶ್ರುತಿಗೊಂಡಿರಬೇಕು. ಇದೇನು ಹೊಸ ವಿಷಯವಲ್ಲ. ನಿಮಗಿದು ತಿಳಿದಿದೆ. ಇದರ ಬಗ್ಗೆ ನಾವು ಸಾಕಷ್ಟು ಸಲ ಮಾತನಾಡಿದ್ದೇವೆ. ಈಗ ತಾನೆ ವಿಶ್ವಾಮಿತ್ರ ಮಹರ್ಷಿಗಳನ್ನು ಪ್ರಾರ್ಥಿಸಿದೆ. ನಾನು ಈ ವಿಷಯವನ್ನು ಗುರುತು ಹಾಕಿಕೊಳ್ಳುತ್ತಿದ್ದಾಗ ಅವರು ಸಂಪರ್ಕಕ್ಕೆ ಬಂದು ಹೇಳಿದರು, "ಯೋಗದ ಬಗೆಗಿನ ಈ ವಿಷಯವನ್ನು ಒತ್ತುಕೊಟ್ಟು ಹೇಳಿ. ಯೋಗವೆಂದರೆ ದೇವರ ಸಮಾಗಮದಲ್ಲಿರುವುದು(union) ಎಂದು ಜನರು ಅರ್ಥಮಾಡಿಕೊಂಡಿದ್ದಾರೆ. ಧ್ಯಾನ ಮಾಡುವಾಗ ನಾವು ದೇವರೊಂದಿಗೆ ಇರುತ್ತೇವೆ, ಈ ಸಮಾಗಮವಿರುತ್ತದೆ. ಈ ಯೋಗ ಭಾಗಶ: ನಿಜ. ದಿನದ 24 ಗಂಟೆಗಳೂ ನಾವು ದೇವರೊಂದಿಗೆ ಶ್ರುತಿಗೊಂಡಿರಬೇಕು, ಸಮಾಗಮದಲ್ಲಿರಬೇಕು. ಆಗ ಮಾತ್ರವೇ ನಿಜವಾದ ಯೋಗವುಂಟಾಗುವುದು. ಅಲ್ಲಿಯವರೆಗೆ ಅದು ಯೋಗವಲ್ಲ." ಇದನ್ನು ಒತ್ತುಕೊಟ್ಟು ನಾನು ಹೇಳಬೇಕಾಗಿಲ್ಲ. ಈ ಪದಗಳು ಅತ್ಯುನ್ನತ ಮಾಸ್ಟರ್‌ಇಂದ ಬಂದದ್ದು. ■

# ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

03-03-2019

ದೇವರು ಈ ಭೂಮಿಯ ಮೇಲಿನ ಬದುಕನ್ನು ಸೃಷ್ಟಿಸಿರುವ ವಿನ್ಯಾಸದ ರೀತಿಯನ್ನು ಬಹುವಾಗಿ ಮೆಚ್ಚುತ್ತೇನೆ ಮತ್ತು ಯಾವಾಗಲೂ ಆಶ್ಚರ್ಯಚಕಿತನಾಗುತ್ತೇನೆ. ಇಲ್ಲಿ ನಿರೀಕ್ಷಿಸಲು ಏನಾದರೂ ಇದ್ದೇ ಇರುತ್ತದೆ. ನಮಗೆ ಎಂದೆಂದಿಗೂ ಆಶಾಭಾವವಿರುತ್ತದೆ. ನಮ್ಮನ್ನು ನಾವು ಮತ್ತೆ ಕ್ರೋಡೀಕರಿಸಿಕೊಂಡು ಹೊಸ ಪ್ರಾರಂಭಗಳನ್ನು ಮಾಡಲು ನಮಗೆ ಅವಕಾಶಗಳು ಇದ್ದೇ ಇರುತ್ತವೆ. ಈ ಭೂಮಿಯ ಮೇಲಿನ ಸುಂದರ ಬದುಕಿನ ವಿನ್ಯಾಸ ಎಂದರೆ ಏನು? ನನ್ನ ಅನಿಸಿಕೆಯನ್ನು ವಿವರಿಸುತ್ತೇನೆ. ನಾಳೆಯಿಂದ 10 ದಿನಗಳವರೆಗೆ ಭಗವಾನ್ ಶಿವನ ಉಪಸ್ಥಿತಿ ಇರುತ್ತದೆ. ನಾವು ಅವನನ್ನು ನಮ್ಮೊಳಗೆ ಸ್ವೀಕರಿಸಬಹುದು, ಅವನ ಇರುವಿಕೆಯ ಅರಿವಿನಲ್ಲಿರಬಹುದು, ಅವನೊಡನೆ ಇರಬಹುದು. ನಾವು ಹೆಚ್ಚು ಧ್ಯಾನ ಮಾಡಬಹುದು, ಅವನನ್ನು ಹೆಚ್ಚು ಸ್ವೀಕರಿಸಬಹುದು. ಆನಂತರ ಕೆಲವು ದಿನಗಳಾದ ಮೇಲೆ ಹೋಳಿ ಹುಣ್ಣಿಮೆಯ ಹಬ್ಬವಿದೆ, ಇದು ನಮ್ಮನ್ನು ಶುದ್ಧೀಕರಿಸಿಕೊಳ್ಳಲು ಮತ್ತು ದೇವರ ಹತ್ತಿರ ಹೋಗಲು ನಮಗೆ ಮತ್ತೊಂದು ಅವಕಾಶ. ಕೆಲವು ದಿನಗಳ ನಂತರ ಹೊಸ ವರ್ಷವಾದ ಯುಗಾದಿ ಇದೆ. ಆಗ ಈ ಭೂಮಿ ಹೊಸ ಚೈತನ್ಯಗಳಿಂದ ತುಂಬುತ್ತದೆ. ನಾವು ಹೊಸ ಪ್ರಾರಂಭಗಳನ್ನು ಮತ್ತೆ ಮಾಡಬಹುದು. ನಂತರ ರಾಮನವಮಿ ಇದೆ, ಮೇ ತಿಂಗಳಲ್ಲಿ ಬುದ್ಧ ಪೂರ್ಣಿಮೆಯಿದೆ. ಹಬ್ಬಗಳು ಬರುತ್ತಿರುತ್ತವೆ, ದೈವೀ ವ್ಯಕ್ತಿಗಳು ಬರುತ್ತಿರುತ್ತಾರೆ. ಅದರಿಂದಾಗಿ ನಮಗೆ ಅವಕಾಶಗಳು ಮತ್ತು ಸದಾಕಾಲ ಆಶಾಭಾವನೆ ಒದಗಿಬರುತ್ತಿರುತ್ತವೆ. ಜೀವನವನ್ನು ಸಂಭ್ರಮಿಸುವ ಇಂತಹ ಅವಕಾಶಗಳು, ಹೊಸ ಚೈತನ್ಯಗಳನ್ನು ಸ್ವೀಕರಿಸಿ ಹೊಸ ಪ್ರಾರಂಭಗಳನ್ನು ಮಾಡುವ ಇಂತಹ ಅವಕಾಶಗಳು, ಈ ಭೂಮಿಯ ಮೇಲಿನ ಬದುಕನ್ನು ಬಹಳ ಸುಂದರವಾಗಿಸುತ್ತವೆ. ನಾನು ಸುಂದರ ವಿನ್ಯಾಸವೆಂದು ಹೇಳುವುದು ಇದನ್ನೇ. ನಾನು ಹೇಳದಿರುವ ಅನೇಕ ಸುಂದರವಾದ ವಿಷಯಗಳಂತೂ ಬಹಳವಿವೆ. ಇಲ್ಲಿಯ ಬದುಕಿನ ವಿನ್ಯಾಸವನ್ನಂತೂ ನಾನು ಯಾವಾಗಲೂ ಮೆಚ್ಚುತ್ತೇನೆ, ಯಾವಾಗಲೂ ಆಶ್ಚರ್ಯಪಡುತ್ತೇನೆ.

ಪ್ರಪಂಚ ನಮಗೆ ಅನ್ಯಾಯ ಮಾಡಿದೆಯೆಂಬ ಭಾವನೆ ನಮ್ಮಲ್ಲಿದ್ದಾಗ ಅದನ್ನು ಹೇಗೆ ನಿಭಾಯಿಸಬೇಕು? ಈ ಭಾವನೆ ಬಹಳ ಕಾಲದವರೆಗೆ ನಮ್ಮಲ್ಲಿದ್ದರೆ ಅದು ಕಹಿ ಭಾವನೆಯ ರೂಪವನ್ನು ಪಡೆಯಬಹುದು. ನಾನು ಪ್ರಪಂಚ ಎಂದು ಹೇಳಿದಾಗ ಅದರ ಅರ್ಥ ಜನರು ಎಂದು. ಪ್ರಪಂಚವು ನಮ್ಮ ಸುತ್ತ ಮುತ್ತಲಿನ ಜನರಿಂದ ಮಾಡಲ್ಪಟ್ಟಿದೆ. ಪ್ರಪಂಚ ನಮಗೆ ಅನ್ಯಾಯ ಮಾಡಿದೆ ಎಂಬ ಭಾವನೆ ಉಂಟಾದಾಗ, ನಮ್ಮ ಸುತ್ತಮುತ್ತಲಿನ ಜನರು ನಮ್ಮೊಂದಿಗೆ ಹೇಗೆ ನಡೆದುಕೊಳ್ಳುತ್ತಾರೆಂದು ನಾವು ಅರ್ಥಮಾಡಿಕೊಂಡಿದ್ದೇವೆಯೋ ಅದರಿಂದಾಗಿ ಈ ಭಾವನೆ ಮೂಡುತ್ತದೆ. ಅವರು ನಮ್ಮೊಂದಿಗೆ ಹೇಗೆ ವರ್ತಿಸುತ್ತಾರೆ, ಹೇಗೆ ನಮ್ಮನ್ನು ನಡೆಸಿಕೊಳ್ಳುತ್ತಾರೆ? ಈ ಭಾವನೆಯನ್ನು ನಾವು ನಿಭಾಯಿಸುವುದು ಹೇಗೆ? ಈ ಭಾವನೆಯನ್ನು ಕಳೆದುಕೊಳ್ಳುವುದು ಹೇಗೆ? ಈ ಭಾವನೆ ತಪ್ಪೆಂದು ನಾನು ಹೇಳುತ್ತಿಲ್ಲ. ಈ ಭಾವನೆಗಳು ನಮ್ಮಲ್ಲಿರುವುದಕ್ಕೆ ಕಾರಣಗಳಿರಬಹುದು. ದೇವರೆಡೆಗೆ ತಿರುಗುವುದೇ ನಾವು ಮಾಡಬಹುದಾದ ಅತ್ಯುತ್ತಮ ಕೆಲಸ ಎಂದು ನಾನು ಭಾವಿಸುತ್ತೇನೆ. ದೇವರೆಡೆಗೆ ತಿರುಗಲು, ದೇವರೆಡೆ ಹೋಗಲು ಒಂದು ರೀತಿಯಲ್ಲಿ ಈ ಜನರು, ಈ ಪ್ರಪಂಚ ನಮಗೆ ಸಹಾಯ ಮಾಡುತ್ತದೆಂದು ನಾವು ಹೇಳಬಹುದು. ನಾವು ದೇವರೆಡೆಗೆ ತಿರುಗಿದರೆ, ದೇವರು ನಮಗೆ ಸಾಂತ್ವನ ನೀಡುತ್ತಾನೆ. ಅವನು ನಮಗೆ ಎಲ್ಲವನ್ನು ಒದಗಿಸುತ್ತಾನೆ, ನಾವು ಹೊತ್ತಿರಬಹುದಾದ ಭಾವನೆಗಳನ್ನು ಉದಾತ್ತಗೊಳಿಸಿಕೊಳ್ಳಲು ಅವನು ಸಹಾಯ ಮಾಡುತ್ತಾನೆ. ಆದ್ದರಿಂದ ದೇವರೆಡೆಗೆ ಚಲಿಸುವುದೇ ನಾವು ಮಾಡಬಹುದಾದ ಅತ್ಯುತ್ತಮ ಕೆಲಸ.

ಆತ್ಮಾವಲೋಕನ ಮಾಡಿಕೊಳ್ಳುವುದು ನಾವು ಮಾಡಬಹುದಾದ ಮತ್ತೊಂದು ಕೆಲಸ. ಅದು ಅತ್ಯುತ್ತಮವೆಂದು ನಾನು ತಿಳಿಯುತ್ತೇನೆ, ಆಧ್ಯಾತ್ಮಿಕ ಸಾಧನೆಯಲ್ಲಿ ಪ್ರಾಮಾಣಿಕ ಆತ್ಮವಿಮರ್ಶೆ ಬಹಳ ಮುಖ್ಯ. ಆತ್ಮವಿಮರ್ಶೆ ಮಾಡಿಕೊಂಡಾಗ, ನಮ್ಮನ್ನು ನಿಜವಾಗಿಯೂ ತಪ್ಪಾಗಿ ಅರ್ಥಮಾಡಿಕೊಂಡಿರುವರೆ ಅಥವ ನಮಗೆ ನಿಜವಾಗಿಯೂ ಅನ್ಯಾಯವಾಗಿದೆಯೇ ಎನ್ನುವ ಅರಿವು ನಮಗುಂಟಾಗುತ್ತದೆ. ನಾವು ಕೂಡ ತಪ್ಪು ಮಾಡಿರಬಹುದು ಮತ್ತು ನಾವು ಪ್ರಪಂಚಕ್ಕೆ ಏನನ್ನು ಕಳಿಸಿದ್ದೇವೊ ಅದನ್ನೇ ಪ್ರಪಂಚ ನಮಗೆ ಹಿಂದಿರುಗಿಸುತ್ತಿರಬಹುದು ಎಂದು ನಮಗೆ ಅರಿವಾಗಬಹುದು. ಅದು ಸಾಧ್ಯವಿದೆ. ನಾವು ಏನನ್ನು ಹೊರಕಳಿಸುತ್ತೇವೋ ಅದೇ ಅಧಿಕ ಪ್ರಮಾಣದಲ್ಲಿ ನಮಗೆ ಹಿಂದಿರುಗುತ್ತದೆಂದು ಗುರೂಜಿಯವರಿಂದ ನಾವು ಕಲಿತಿದ್ದೇವೆ. ಪ್ರೀತಿಯನ್ನು ಕಳಿಸಿದರೆ ನಾವು ವಿಶ್ವದಿಂದ ಪ್ರೀತಿಯನ್ನು ಪಡೆಯುತ್ತೇವೆ. ನಮ್ಮಲ್ಲೇಕೆ ಆ ರೀತಿಯ ಭಾವನೆಗಳಿವೆಯೆಂದು ತಿಳಿಯಲು ಆತ್ಮವಿಮರ್ಶೆಯ ಮೂಲಕ ಪ್ರಯತ್ನಿಸಬೇಕು. ಅದಕ್ಕೆ ಮೂಲ ಕಾರಣವೇನು? ಆತ್ಮವಿಮರ್ಶೆಯೇ ಅತ್ಯುತ್ತಮವೆಂದು ಬಗೆಯುತ್ತೇನೆ. ನಮಗೆ ಸತ್ಯ ತಿಳಿದಾಗ, ಸತ್ಯ ಯಾವುದಾದರೂ ಇರಲಿ ನಾವು ಅದನ್ನು ಒಪ್ಪಿಕೊಳ್ಳಬೇಕು. ತಪ್ಪು ನಮ್ಮದೆಂದು ತಿಳಿದಾಗ ನಾವು ಅದನ್ನು ಸರಿಪಡಿಸಿಕೊಳ್ಳಬೇಕು ಮತ್ತು ಅದೇ ತಪ್ಪನ್ನು ಮತ್ತೊಮ್ಮೆ ಮಾಡದಂತೆ ಎಚ್ಚರವಹಿಸಬೇಕು. ಪ್ರಪಂಚದೆಡೆಗಿನ ನಮ್ಮ ಧೋರಣೆಗಳನ್ನು, ನಮ್ಮ ಪ್ರತಿಕ್ರಿಯೆಗಳನ್ನು ನಾವು ಸರಿಪಡಿಸಿಕೊಳ್ಳಬಹುದು ಮತ್ತು ಉತ್ತಮ ಪಡಿಸಿಕೊಳ್ಳಬಹುದು; ನಮ್ಮಲ್ಲಿರುವ ಯಾವುದೇ ನ್ಯೂನತೆಗಳನ್ನು, ಇತಿಮಿತಿಗಳನ್ನು ಉತ್ತಮ ಪಡಿಸಿಕೊಳ್ಳಬಹುದು. ನಾವು ಹೆಚ್ಚು ಧ್ಯಾನಮಾಡಬಹುದು, ಹೆಚ್ಚು ಪ್ರೀತಿಯನ್ನು ಹೊಂದಬಹುದು, ಹೆಚ್ಚು ಬೆಳಕನ್ನು ಹೊಂದಬಹುದು.

ನಮ್ಮದೇನೂ ತಪ್ಪಿಲ್ಲ, ಪ್ರಪಂಚವು ನಮಗೆ ನಿಜವಾಗಿಯೂ ಅನ್ಯಾಯ ಮಾಡುತ್ತಿದೆಯೆಂದು ನಮಗೆ ಅರಿವಾದರೆ, ಬಹುಮಟ್ಟಿಗೆ ಅದು ನಮಗೆ ಪರೀಕ್ಷೆಯಾಗಿರಬಹುದು ಎಂದು ನಾವು ಅರಿತುಕೊಳ್ಳಬೇಕು. ಅಲ್ಲದಿದ್ದರೆ ವಿನಾಕಾರಣ ಪ್ರಪಂಚವೇಕೆ ನಮ್ಮ ವಿರುದ್ಧವಾಗುತ್ತದೆ? ಮತ್ತೊಮ್ಮೆ ಹೇಳುತ್ತಿದ್ದೇನೆ, ಪ್ರಪಂಚ ಎಂದು ನಾನು ಹೇಳಿದಾಗ ಅದರ ಅರ್ಥ ನಮ್ಮ ಸುತ್ತಮುತ್ತಲಿನ ಜನರು ಎಂದು. ಪ್ರಪಂಚ ನಮ್ಮನ್ನು ಗಂಭೀರವಾಗಿ ಪರಿಗಣಿಸುತ್ತದೆಂದು ನಾವು ತಿಳಿದಿರಬಹುದು ಆದರೆ ವಾಸ್ತವವೆಂದರೆ ಪ್ರಪಂಚದ ಬಳಿ ನಮಗಾಗಿ ಸಮಯವಿಲ್ಲ. ಜನರಿಗೆ ತಮ್ಮದೇ ಚಿಂತೆಗಳು ತಮ್ಮದೆ ಸಮಸ್ಯೆಗಳು ಇರುತ್ತವೆ. ನಮ್ಮ ಬಗ್ಗೆ, ಸಕಾರಾತ್ಮಕವಾಗಿಯಲ್ಲದಿದ್ದರೂ ನಕಾರಾತ್ಮಕವಾಗಿ ಯೋಚಿಸಲೂ, ಬಹುಶಃ ಅವರಿಗೆ ಸಮಯವಿರುವುದಿಲ್ಲ. ಆದ್ದರಿಂದ ಬಹುಶಃ ನಮ್ಮನ್ನು ಪರೀಕ್ಷಿಸಲಾಗುತ್ತಿದೆಯೆಂದು ತಿಳಿಯಬೇಕು.

'ದೇವರು ವಿಕೃತ ಹಿಂಸಾಚಾರಿಯಲ್ಲ,' ಎಂಬ ಗುರೂಜಿಯವರ ಮಾತುಗಳು ನನಗೆ ನೆನಪಾಗುತ್ತದೆ. ನಮಗೆ ನೋವಿದ್ದರೆ ಅವನಿಗೇನೂ ಸಂತೋಷವಾಗುವುದಿಲ್ಲ. ಆದರೆ ಕೆಲವು ಪರೀಕ್ಷೆಗಳು ನಮ್ಮನ್ನು ಕಷ್ಟದ ಸನ್ನಿವೇಶಗಳಲ್ಲಿರಿಸಬಹುದು. ಅದು ಸಾಧ್ಯ. ಅವನು ನಮ್ಮಲ್ಲಿರುವ ಪ್ರೀತಿಯನ್ನು ಪರೀಕ್ಷಿಸುತ್ತಿರಬಹುದು. ನಮ್ಮಲ್ಲಿರುವ ತಾಳ್ಮೆಯನ್ನು ಅವನು ಪರೀಕ್ಷಿಸುತ್ತಿರಬಹುದು. ಬೇರೆಯವರೊಂದಿಗೆ ಎಷ್ಟು ಹೊಂದಿಕೊಂಡು ಹೋಗುತ್ತೇವೆಂದು ಪರೀಕ್ಷಿಸುತ್ತಿರಬಹುದು. ನಮಗೆ ಅವನಲ್ಲಿ ಎಷ್ಟು ನಂಬಿಕೆಯಿದೆಯೆಂದು ಪರೀಕ್ಷಿಸುತ್ತಿರಬಹುದು. ಶರಣಾಗತಿಯಲ್ಲಿಯಲ್ಲಿದ್ದಾಗ ನಾವು ಎಲ್ಲವನ್ನು ಒಪ್ಪಿಕೊಳ್ಳುತ್ತೇವೆ, ನಕಾರಾತ್ಮಕತೆಯನ್ನು ಕೂಡ. ನಕಾರಾತ್ಮಕತೆಯನ್ನು ನಾವು ಒಪ್ಪಿಕೊಳ್ಳುತ್ತೇವೆಂದು ನಾನು ಹೇಳಿದಾಗ, ಅದರ ಅರ್ಥ ನಕಾರಾತ್ಮಕ ಪ್ರತಿಕ್ರಿಯೆಗಳನ್ನು ಕೂಡ ನಾವು ಒಪ್ಪಿಕೊಳ್ಳುತ್ತೇವೆ ಎಂದಾಗಿದೆ. 'ನನಗೆ ಹೀಗೆ ಆಗಲು ದೇವರು ಅವಾಕಾಶಮಾಡಿಕೊಟ್ಟಿದ್ದರೆ, ಅದು ಸರಿಯಾಗಿಯೇ ಇರಬೇಕು. ನನಗೆ ಯಾವುದು ಒಳ್ಳೆಯದೆಂದು ಅವನಿಗೆ ತಿಳಿದಿದೆ,' ಎಂಬ ಗುರೂಜಿಯವರ ಮಾತುಗಳು ನನಗೆ ನೆನಪಿದೆ.

ಆದ್ದರಿಂದ ವಾಸ್ತವವೇನೇ ಇರಲಿ, ಸತ್ಯವನ್ನು ಅರ್ಥಮಾಡಿಕೊಂಡು ಅದನ್ನು ಒಪ್ಪಿಕೊಂಡರೆ, ಆಗ ಅದು, ಈ ಪ್ರಪಂಚವು ನಮಗೆ ಅನ್ಯಾಯ ಮಾಡುತ್ತಿದೆಯೆಂಬ ಭಾವನೆಯನ್ನು ಮೀರಿ ಹೋಗಲು ನಮಗೆ ಸಹಾಯ ಮಾಡುತ್ತದೆ. ಧ್ಯಾನದೊಂದಿಗೆ, ಪ್ರೀತಿಯೊಂದಿಗೆ ನಾವು ದೇವರನ್ನು ಪ್ರವೇಶಿಸುತ್ತೇವೆ, ಅಲ್ಲಿ ಯಾವುದೇ ನಕಾರಾತ್ಮಕತೆ, ಯಾವುದೇ ಕಹಿ ಭಾವ ಉಳಿಯುವುದಿಲ್ಲ. ಇದು ನನ್ನ ನಂಬಿಕೆ. ದೇವರೆಡೆಗಿನ, ಪರಿಪೂರ್ಣತೆಯೆಡೆಗಿನ ನಮ್ಮ ಪ್ರಯಾಣಕ್ಕೆ ನಕಾರಾತ್ಮಕತೆಯನ್ನೊಳಗೊಂಡಂತೆ ಸೃಷ್ಟಿಯ ಪ್ರತಿಯೊಂದೂ ನಮಗೆ ಸಹಾಯ ಮಾಡುತ್ತದೆ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರು – ವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫ್ಲೀಯು ರೂ. 4500. ಈ ಫ್ಲೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ್ಲೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ್ಲೀಯು ರೂ. 3500. ಈ ಫ್ಲೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು 'Manasa Light Age Foundation' ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಮಾಸ್ಟರ್ ಜೊತೆಗಿನ ಪಯಣ

ಗುರೂಜಿ ಕೃಷ್ಣಾನಂದ; ಅನು: ಸುಜಾತ ವಿ

('ಮಾನಸ ಪತ್ರ'ದ 1989ರ ನವೆಂಬರ್ ಮತ್ತು ಡಿಸೆಂಬರ್ ಸಂಚಿಕೆಯಿಂದ)

ಅದು ಶಿವರಾತ್ರಿಯ ಮಾರನೆಯ ದಿವಸ. ನಾನು ಭೇಟಿ ಆಗಲು ನಿಶ್ಚಿತವಾದ ದಿನ. ನಾನು ದೇವರ ಕೋಣೆಯನ್ನು ಪ್ರವೇಶಿಸುತ್ತಿದ್ದಂತೆಯೆ ಎಲ್ಲಾ ಕಡೆ ವಿಭೂತಿ ಇರುವುದನ್ನು ಗಮನಿಸಿದೆ– ವಿಗ್ರಹಗಳ ಮೇಲೆ, ಚಿತ್ರಪಟಗಳ ಮೇಲೆ, ಗೋಡೆಗಳ ಮತ್ತು ಒಳತಾರಸಿಯ ಮೇಲೂ ಕೂಡ! ಸುವಾಸನೆಯೂ ಕೂಡ ಅಲೌಕಿಕವಾಗಿತ್ತು.

ಯಾವುದೇ ರೋಮಾಂಚನಕ್ಕೆ ಒಳಗಾಗದೆ ಅಮರರವರು ವಿವರಿಸಿದರು.

"ಸಪ್ತಋಷಿಗಳು ನೆನ್ನೆ ಭೇಟಿ ನೀಡಿದ್ದರು ಮತ್ತು ಅವರು ಗುರುತನ್ನು ಬಿಟ್ಟುಹೋಗಿದ್ದಾರೆ."

"ಬೇರೆ ಯಾರಾದರೂ ಅವರನ್ನು ನೋಡಿದರ ಸರ್?"

"ಹೌದು ನನ್ನ ಹೆಂಡತಿ ಇಲ್ಲಿದ್ದರು. ಮತ್ತು ನನ್ನ ನಾದಿನಿ.... ನಾವೆಲ್ಲರೂ ಅವರನ್ನು ಪೂಜಿಸಿದೆವು."

"ಇನ್ನು ಬೇರೆ ಯಾರಾದರೂ....?"

ನಾವು ದಪ್ಪವಾದ ಮೆತ್ತನೆಯ ನೆಲಹಾಸಿನ ಮೇಲೆ ಕುಳಿತು ಕೊಳ್ಳುತ್ತಿದ್ದಂತೆಯೆ ಅಮರರವರು ನಕ್ಕರು.

"ಅವರು ಸಾಮಾನ್ಯವಾಗಿ ಭೌತಿಕವಾಗಿ ಕಾಣಿಸಿಕೊಳ್ಳುವುದಿಲ್ಲ. ಒಂದು ಸಾರಿ ಅವರು ಕಾಣಿಸಿಕೊಂಡಾಗ ನನ್ನ ಸ್ನೇಹಿತ ಅವರನ್ನು ನೋಡಿದ ಮತ್ತು ಅವರ ಜೊತೆ ಮಾತಾನಾಡಿದ. ಅದು ಸುಮಾರು 50 ವರ್ಷಗಳ ಹಿಂದೆ."

"ನಿಮ್ಮ ಸ್ನೇಹಿತ ಬದುಕಿದ್ದಾರ?"

"ಖಂಡಿತವಾಗಿ! ಅವರು ಬೆಂಗಳೂರಿನಲ್ಲಿ ಇದ್ದಾರೆ!"

"ನಾನು ಕೂಡ ಋಷಿಗಳನ್ನು ನೋಡಬಹುದಾ?"

"ಹೌದು... ಆದರೆ ನೀವು ಕಾಯಬೇಕು."

ನಾನು ಅಮರರವರ ಬಳಿಯಿಂದ ಹೊರಡುವಾಗ, ಅವರ ಸ್ನೇಹಿತನ ವಿಳಾಸವನ್ನು ತೆಗೆದುಕೊಳ್ಳಲು ಮರೆಯಲಿಲ್ಲ.

ಆ ಸ್ನೇಹಿತನನ್ನು ಬೇಟಿ ಮಾಡಿದೆ. ಅವರು ಹಾಸಿಗೆ ಹಿಡಿದಿದ್ದರು. ಒಂದು ಅಪಘಾತವು ಅವರನ್ನು ಕುಂಟರನ್ನಾಗಿ ಮಾಡಿತ್ತು. ಆದರೆ ಅದಕ್ಕೆ ಅವರ ಕಣ್ಣಿನ ಕಾಂತಿಯನ್ನು ತೆಗೆದುಕೊಳ್ಳಲಾಗಲಿಲ್ಲ. ಮಾತನಾಡಲು ಅವರಿಗೆ ಮನಸ್ಸಿರಲಿಲ್ಲ. ಆದರೆ ನಾನು ಅಮರರವರ ಹೆಸರು ಹೇಳಿದಾಗ, ಅವರು ಹಾಗೆಯೇ ಕರಗಿದರು.

" ಅವರು ನಿಮಗೆ ಗೊತ್ತಿಲ್ಲ. ಯಾರಿಗೂ ಗೊತ್ತಿಲ್ಲ... ಅವರ ಸರಳತೆಯಿಂದ ನೀವು ಮರುಳಾಗಬೇಡಿ. ನೀವು ಸಾವಿರ ಬಾಬಾರನ್ನು ಒಟ್ಟುಗೂಡಿಸಿದರೂ ಅವರ ಸಮಾನ–ರಾಗುವುದಿಲ್ಲ."

"ಅವರೊಬ್ಬ ಋಷಿಯೇ?"

"ಹೌದು. ತುಂಬಾ ಶ್ರೇಷ್ಠ ಮಟ್ಟದವರು. ಅವರು ಷರ್ಟ್ ಮತ್ತು ಪ್ಯಾಂಟ್ ಧರಿಸುವುದರಿಂದ ಅವರನ್ನು ತಪ್ಪಾಗಿ ಅರ್ಥಮಾಡಿಕೊಳ್ಳಬೇಡಿ."

"ನೀವು ಅವರನ್ನು ಭೇಟಿ ಮಾಡಿದ್ದು ಯಾವಾಗ?"

"ಸುಮಾರು ಐವತ್ತು ವರ್ಷಗಳ ಹಿಂದೆ. ನಾವು ಶಾಲೆಯಲ್ಲಿ ಸಹಪಾಠಿಗಳಾಗಿದ್ದೆವು. ಆಗಲೂ ಅವರು ಬಹಳ ವಿಭಿನ್ನರಾಗಿದ್ದರು. ಅವರು ಸಂಕೋಚದ ಸ್ವಭಾವದವರು ಎಂದು ಮೊದಲು ನಾನು ಭಾವಿಸಿದ್ದೆ. ಆದರೆ ಅದು ಹಾಗಿರಲಿಲ್ಲ. ಅವರು ಮೌನವಾಗಿರುತ್ತಿದ್ದರು ಮತ್ತು... ದೇಹಕ್ಕಿಂತ ಬೃಹತ್ತಾಗಿದ್ದರು. ಅವರು ನಮ್ಮ ಹಾಗೆ ಆಟವಾಡುತ್ತಿದ್ದರು, ಹಾಸ್ಯ, ಕೀಟಲೆ ಮಾಡುತ್ತಿದ್ದರು. ಆದರೆ... ನೋಡಿ... ಅವರು ಬಹಳ ಬಹಳ... ಭವ್ಯವಾಗಿ ಕಾಣುತ್ತಿದ್ದರು..."

"ನೀವು ಋಷಿಗಳನ್ನು ನೋಡಿರುವಿರಾ?"

"ಹೌದು.

"ಶಾರೀರಿಕವಾಗಿ?"

"ಹೌದು... ನಾನು ಅವರ ಜೊತೆ ಆಟವಾಡಲು ಒಂದು ಬೆಳಗ್ಗೆ ಹೋದಾಗ ಅವರ ಕೊಠಡಿಯ ಕಿಟಕಿ ಮುಚ್ಚಿದ್ದನ್ನು ನೋಡಿದೆ. ಅವರನ್ನು ಆಶ್ಚರ್ಯ ಗೊಳಿಸಬೇಕೆಂದುಕೊಂಡೆ. ಕಿಟಕಿಯನ್ನು ತೆಗೆಯಲು ಪ್ರಯತ್ನಿಸಿದೆ, ಅದು ತೆರೆದುಕೊಂಡಿತು. ನಾನು ಕೂಗಲು ಒಳಗೆ ಇಣುಕಿದಾಗ ಅವರು ಕುಳಿತಿರುವುದು ಕಾಣಿಸಿತು! ಅಮರರವರ ಜೊತೆ ಎಲ್ಲಾ ಏಳು ಜನರು ಒಂದು ವೃತ್ತಾಕಾರದಲ್ಲಿ ಕುಳಿತ್ತಿದ್ದರು! ಅವರು ನನ್ನನ್ನು ನೋಡಿ ಒಳಗೆ ಬರಲು ಸನ್ನೆಮಾಡಿದರು. ಅವರೆ ಋಷಿಗಳೆಂದು ನನಗೆ ಅಗ ಗೊತ್ತಿರಲಿಲ್ಲ."

" ಸಪ್ತಋಷಿಗಳು!"

"ಹೌದು, ಅವರೇ ಸಪ್ತಋಷಿಗಳು."

(ಮುಂದುವರೆಯುತ್ತದೆ)

## ಪ್ರಶ್ನೋತ್ತರಗಳು

**ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ**

**ಪ್ರ: ನಾವು ಹುಟ್ಟುವ ಮೊದಲೇ ಏನನ್ನು ಆಯ್ಕೆ ಮಾಡಿಕೊಂಡಿದ್ದೆವೆನ್ನುವುದನ್ನು ತಿಳಿದು ಕೊಳ್ಳುವುದು ಹೇಗೆ?**

ಉ: ನಾವು ಹುಟ್ಟುವ ಮೊದಲೇ ಏನನ್ನು ಆಯ್ಕೆ ಮಾಡಿಕೊಂಡಿದ್ದೆವೆಂದು ನಮಗೆ ಯಾರೂ ಹೇಳುವುದಿಲ್ಲ. ನಮ್ಮ ಬಾಲ್ಯದ ಪ್ರವೃತ್ತಿಗಳು, ಆಸಕ್ತಿಗಳು ಮತ್ತು ನಮ್ಮ ಹವ್ಯಾಸಗಳು ನಮ್ಮ ಆಯ್ಕೆಗಳನ್ನು ಸೂಚಿಸುತ್ತವೆ. ನಾವು ಯಾವ ಒಂದು ನಿರ್ದಿಷ್ಟ ಕಾರಣಕ್ಕಾಗಿ ಹುಟ್ಟಿ ಬಂದಿದ್ದೇವೆಂಬ ವಿಷಯ ಬಹಿರಂಗಗೊಂಡು ನಂತರ ನಾವು ಆ ಗುರಿಯೆಡೆಗೆ ಸಾಗಲೂಬಹುದು. ಇಚ್ಛಾ ಸ್ವಾತಂತ್ರ್ಯದ ಮಹಾನ್ ಕೊಡುಗೆ ನಮಗೆ ಇದೆ. ನಾವು ಹುಟ್ಟುವ ಮೊದಲೇ ಆಯ್ಕೆ ಮಾಡಿ ಕೊಂಡಿರುವುದನ್ನು ಬಿಡಬಹುದು ಮತ್ತು ಸಂಪೂರ್ಣವಾಗಿ ಬೇರೆಯದನ್ನು ಆಯ್ಕೆ ಮಾಡಿಕೊಂಡು ಆ ಗುರಿಯೆಡೆಗೆ ಸಾಗಬಹುದು.

**ಪ್ರ: ನಾವು ಎರಡು ಕಡೆ ಇರುವುದು (bi-locate) ಹೇಗೆ?**

ಉ: ‘ಬೈ-ಲೊಕೇಷನ್’ ಅಂದರೆ ಒಂದೇ ಸಮಯದಲ್ಲಿ ಭೌತಿಕವಾಗಿ ಎರಡು ಸ್ಥಳಗಳಲ್ಲಿ ಇರುವುದು. ಸೂಕ್ಷ್ಮ ಶರೀರ ಬೇರೊಂದು ಸ್ಥಳಕ್ಕೆ ಹೋಗಿ ಭೌತಿಕ ರೂಪವನ್ನು ಪಡೆಯುತ್ತದೆ. ಅದು ಪಂಚ ಭೂತಗಳಿಂದ ಭೌತಿಕ ಶರೀರವನ್ನು ಪಡೆಯುತ್ತದೆ. ಹೀಗೆ ಪಡೆದುಕೊಂಡ ಶರೀರ ಮೂಲ ಭೌತಿಕ ಶರೀರದಿಂದ ಭಿನ್ನವಾಗಿರುವುದಿಲ್ಲ. ಈ ರೀತಿಯಲ್ಲಿ ನಾವು ಒಂದೇ ಸಮಯದಲ್ಲಿ ಭೌತಿಕವಾಗಿ ಎರಡು ಸ್ಥಳಗಳಲ್ಲಿ ಇರುತ್ತೇವೆ. ನಮಗಿನ್ನೂ ಇದರ ಟೆಕ್ನಿಕ್ ತಿಳಿದಿಲ್ಲ..

**ಪ್ರ: ದೈವೀ ನೀತಿಬೋಧೆಗಳಿವೆಯೇ(morals)?**

ಉ: ಪ್ರತಿಯೊಂದು ಭೂಮಿ ಹಾಗೂ ಅಸ್ತಿತ್ವದಲ್ಲಿರುವ ಪ್ರತಿಯೊಂದು ಸ್ಥಳಕ್ಕೂ ಅದರದೇ ಸ್ಥಳೀಯ ತಿಳುವಳಿಕೆಗಳು ಮತ್ತು ನಿಯಮಗಳು ಇರುತ್ತವೆ. ನೀತಿಬೋಧೆಗಳು ಮಾನವ ನಿರ್ಮಿತ. ತನ್ನ ಜನರಿಗೆ ಯಾವುದು ಸೂಕ್ತವೆಂದು ಸಮಾಜ ನಿರ್ಧರಿಸುತ್ತದೆ. ದೈವೀ ಲೋಕಗಳಲ್ಲಿ ಅವರು ತಮ್ಮದೇ ಆದ ಸ್ಥಳೀಯ ನಿಯಮಗಳನ್ನು ಮಾಡಿಕೊಂಡಿರಬಹುದು. ನಮಗದು ತಿಳಿದಿಲ್ಲ.

**ಪ್ರ: ಅತೀಂದ್ರಿಯ ಪ್ರಯಾಣ (mystic travel) ಅಂದರೆ ಏನು?**

ಉ: ಅತೀಂದ್ರಿಯ ಪ್ರಯಾಣ ಅನ್ನುವುದು ಇಲ್ಲ. ಆದರೆ ಯಾರಾದರೂ ಅಜ್ಞಾತದ ಸ್ತರಗಳನ್ನು ಅಧ್ಯಯನ ಮಾಡಬಹುದು ಮತ್ತು ಅದರ ಅನುಭವ ಪಡೆಯಬಹುದು.

**ಪ್ರ: ಸೂಕ್ಷ್ಮ ಜಗತ್ತಿನಲ್ಲಿ ಜನರು ಯಾವಾಗಲೂ 30 ವರ್ಷದವರಂತೆ ಕಾಣುತ್ತಾರೆನ್ನುವುದು ನಿಜವೇ?**

ಉ: ಸೂಕ್ಷ್ಮ ಜಗತ್ತಿನಲ್ಲಿ ಜನರು ಯಾವಾಗಲೂ ಯುವ ವಯಸ್ಸಿನವರಾಗಿ ಕಾಣಿಸುತ್ತಾರೆ. ಸೂಕ್ಷ್ಮ ಶರೀರಕ್ಕೆ ವಯಸ್ಸಾಗುವುದು ಬಹಳ ನಿಧಾನ. ವ್ಯಾಸ ಮಹರ್ಷಿಗಳು ಒಬ್ಬ ಪ್ರಾಚೀನ ಕಾಲದ ಮಹರ್ಷಿ. ಮಾರ್ಕಂಡೇಯ ಮಹರ್ಷಿಗಳಿಗೆ ಹಲವು ಲಕ್ಷಗಳಷ್ಟು ವಯಸ್ಸಾಗಿದೆ. ಅವರು ಭೌತಿಕ ಶರೀರವನ್ನು ಹೊಂದಿದ್ದಾರೆ.

**ಪ್ರ: ಮಗುವೊಂದು ತೀರಿಕೊಂಡ ನಂತರ ಸೂಕ್ಷ್ಮ ಜಗತ್ತಿಗೆ ಹೋದರೆ, ಅಲ್ಲಿ ಆ ಮಗುವಿನ ವಯಸ್ಸು ಎಷ್ಟಿರುತ್ತದೆ?**

ಉ: ಅದರ ವಯಸ್ಸು ಸೂಕ್ಷ್ಮ ಶರೀರದ ವಯಸ್ಸಿನಷ್ಟು ಇರುತ್ತದೆ

**ಪ್ರ: ಒಂದು ವೇಳೆ ಒಬ್ಬ ವ್ಯಕ್ತಿ ಧ್ಯಾನ ಮಾಡಿ ಕರ್ಮಗಳನ್ನು ತೀರಿಸಿದರೆ, ಆ ವ್ಯಕ್ತಿಯ ಜೀವಿತಾವಧಿ ಬದಲಾಗುತ್ತದೆಯೇ?**

ಉ: ಸಾಮಾನ್ಯವಾಗಿ ನಮ್ಮ ಜೀವಿತಾವಧಿಯನ್ನು, ಹಿಂದಿನ ಜನ್ಮಗಳಿಂದ ನಾವು ಹೊತ್ತು ಬಂದಿರುವ ಕರ್ಮಗಳ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ. ಒಬ್ಬ ವ್ಯಕ್ತಿ ಎಲ್ಲ ಕರ್ಮಗಳನ್ನು ತೀರಿಸಿಕೊಂಡರೂ, ಇಲ್ಲಿಗೆ ಬರುವಾಗ ತಾನು ಪಡೆದುಕೊಂಡು ಬಂದಷ್ಟು ಕಾಲದವರೆಗೆ ಇಲ್ಲಿ ಬದುಕಿರಬೇಕು. ಅದು ನಿಯಮ. ಸಂಗ್ರಹಿಸಿಕೊಂಡಿರಬಹುದಾದ ಹೊಸ ಕರ್ಮಗಳನ್ನು ತೀರಿಸಲು ನಾವು ಪ್ರತಿ ದಿನ ಧ್ಯಾನ ಮಾಡಬೇಕು.

**ಪ್ರ: ನಾನು ನಿಯಮಿತವಾಗಿ ಧ್ಯಾನ ಮಾಡುತ್ತಿದ್ದರೂ, ಬಹಳ ಖಿನ್ನತೆಗೆ ಒಳಗಾಗಿದ್ದೇನೆ. ದಯಮಾಡಿ ಸಲಹೆ ನೀಡಿ.**

ಉ: ನಾವು ಧ್ಯಾನ ಮಾಡಬೇಕು ಮತ್ತು ಸಕಾರಾತ್ಮಕರಾಗಲು ಪ್ರಯತ್ನ ಮಾಡಬೇಕು. ನಾವು ಶಂಬಲ ನಿಯಮಗಳನ್ನು ಅಭ್ಯಾಸ ಮಾಡಬೇಕು ಮತ್ತು ನಮ್ಮಲ್ಲಿ ಬೆಳಕನ್ನು ಹೊತ್ತಿರಬೇಕು. ಪ್ರೀತಿಯನ್ನು ಅಭಿವ್ಯಕ್ತಪಡಿಸಿ, ಜೀವ ಶಕ್ತಿಯನ್ನು ಅಭಿವ್ಯಕ್ತಪಡಿಸಿ, ಎಂಬ ನಮ್ಮ ಸೂಚನೆಗಳನ್ನು ನೀವು ಪಾಲಿಸಿದ್ದೀರಾ? ಪವಾಡಗಳು ಸಂಭವಿಸುತ್ತವೆ. ಆದರೆ ನಾವು ಪ್ರಯತ್ನಿಸಬೇಕು.


**ಪ್ರ: ನಮ್ಮ ನಕಾರಾತ್ಮಕತೆಗಳನ್ನು ನಾವು ಮೀರಿಹೋಗುವುದು ಹೇಗೆ?**

ಉ: ಧ್ಯಾನದ ಪ್ರಭಾವವು ನಿಮ್ಮಲ್ಲಿ ಕೆಲಸ ಮಾಡುವುದಕ್ಕೆ ಅನುವು ಮಾಡಿಕೊಡಿ. ಆಗ ನಕಾರಾತ್ಮಕತೆಗಳು ಇರುವುದಿಲ್ಲ. ಪ್ರೀತಿಯನ್ನು ಅನುಭವಿಸಿ, ಪ್ರೀತಿಯನ್ನು ವ್ಯಕ್ತಪಡಿಸಿ, ಬೆಳಕಿನ ಅನುಭವ ಪಡೆಯಿರಿ. ಆಗ ದಿನ ಪೂರ್ತಿ ಸಂತೋಷದಿಂದ ತುಂಬಿರುತ್ತದೆ, ನಕಾರಾತ್ಮಕತೆಗಳು ಇರುವುದಿಲ್ಲ. ಅಪ್ರೀತಿಯಿಂದ ನಕಾರಾತ್ಮಕತೆಗಳು ಬರುತ್ತವೆ. ■


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| Thus Spoke Guruji Krishnananda - Vol 1 | 200/- |
| Thus Spoke Guruji Krishnananda - Vol 2 | 250/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आय्गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु-शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

Published: 21st of Every Month. RNI. No. KARKAN/2003/13739 Regd. Postal Regn. No. KARN/BGE/1124/ 2017-2019
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



ಗುರೂಜಿ ಕೃಷ್ಣಾನಂದ (1939 - 2012)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ಎರಡು ತಿಂಗಳುಗಳ ಹಿಂದೆ ನಾನು ತೀವ್ರವಾದ ಸೊಂಟದ ನೋವಿನಿಂದ ಬಳಲುತ್ತಿದ್ದೆ. ವೈದ್ಯರು ನೋವು ನಿವಾರಕ ಮಾತ್ರೆಗಳನ್ನು ಹಾಗೂ ನರಗಳಿಗೆ ವಿಟಮಿನ್ ಮಾತ್ರೆಗಳನ್ನು ಕೊಟ್ಟಿದ್ದರು. ಒಂದು ರಾತ್ರಿ ನೋವು ತೀವ್ರವಾಯಿತು, ಒಂದು ಪಕ್ಕದಿಂದ ಇನ್ನೊಂದು ಪಕ್ಕಕ್ಕೆ ತಿರುಗಲೂ ನನಗೆ ಸಾಧ್ಯವಾಗುತ್ತಿರಲಿಲ್ಲ. ಹಾಸಿಗೆಯ ಮೇಲೆ ಮಲಗಿಕೊಂಡೇ ಸಪ್ತರ್ಷಿ ಪ್ರಾಣಾಯಾಮ ಮಾಡಲು ಪ್ರಾರಂಭಿಸಿದೆ. ಯಾರೋ ನನಗೆ ಮಾರ್ಗದರ್ಶನ ಮಾಡುತ್ತಿರುವಂತೆ ಭಾಸವಾಯಿತು. ಆಗ ಬೆಳಗಿನ ಜಾವ 3.30 ಆಗಿತ್ತು. ಅದನ್ನು ಮುಗಿಸಲು ನಾನು ಅರ್ಧ ಘಂಟೆಯನ್ನು ತೆಗೆದುಕೊಂಡೆ. 4 ಗಂಟೆಗೆ ಗಾಢವಾದ ನಿದ್ರೆಗೆ ಜಾರಿದೆ. ಅಂದಿನಿಂದ ಇಂದಿನವರೆಗೂ ಆ ನೋವು ಮತ್ತೊಮ್ಮೆ ಬಂದಿಲ್ಲ. ನೀವು ಕಲಿಸಿ ಕೊಡುತ್ತಿರುವ ಎಲ್ಲಾ ತಂತ್ರಗಳಿಗಾಗಿ ನನ್ನ ಹೃತ್ಪೂರ್ವಕ ವಂದನೆಗಳು.

ಈಗ ನಾನು ಅತ್ಯಂತ ಪ್ರಶಾಂತವಾಗಿ ಮತ್ತು ನೆಮ್ಮದಿಯಿಂದ ಇದ್ದೇನೆ. ಸಂತೋಷವನ್ನು ನನ್ನೊಳಗೆ ಅನುಭವಿಸುತ್ತೇನೆ. ಯಾರ ವಿರುದ್ಧವೂ ದೂರುವುದಿಲ್ಲ. ಎಲ್ಲರನ್ನೂ ಅವರಿರುವಂತೆಯೇ ಒಪ್ಪಿಕೊಳ್ಳುತ್ತೇನೆ.

–ನಸ್ರೀನ್ ಬೇಗಂ

ಎಲ್ಲಾ ಸಂದರ್ಭಗಳನ್ನೂ ಒಪ್ಪಿಕೊಳ್ಳುವುದು ಈಗ ನನ್ನಲ್ಲಾಗಿರುವ ಬದಲಾವಣೆ. ನಾನೀಗ ಹೆಚ್ಚು ಶಕ್ತಿವಂತಳಾಗಿದ್ದೇನೆ. ಆಂತರಿಕವಾಗಿ ಏನೇ ಸಂಭವಿಸಿದರೂ, ನಾನು ಅದರೊಂದಿಗೆ ರಾಜಿಯಾದ ತಕ್ಷಣದಲ್ಲೇ ನನ್ನ ಅಪೇಕ್ಷೆಗಳು ಈಡೇರುವುದನ್ನು ಗಮನಿಸಿದ್ದೇನೆ. "ಕಾಲ ಬಂದಾಗ ಎಲ್ಲವೂ ಸಿಗುತ್ತದೆ. ಏನನ್ನೂ ಕೇಳಬೇಡ," ಎಂದು ಯಾರೋ ಹೇಳುತ್ತಿರುವಂತಿರುತ್ತದೆ.

–ನಂದಿತಾ ಪಟೇಲ್

ನನ್ನ ತಾಯಿ ಕ್ಯಾನ್ಸರ್ ಕಾಯಿಲೆಯ ಕೊನೆಯ ಹಂತದಲ್ಲಿದ್ದಾಗ ನಾನು ಋಷಿಗಳ ಸಹಾಯವನ್ನು ಬೇಡಿ ಇ–ಮೇಲ್ ಮಾಡಿದೆ. ಅವರ ಕೊನೆಯ ಕ್ಷಣದವರೆಗೂ ಸಹಾಯ, ಮಾರ್ಗದರ್ಶನ ಹಾಗೂ ಪೋಷಣೆ ದೊರೆಯಿತು. ಅಂತಹ ಕಠಿಣ ಹಾಗೂ ಸಹಿಸಲು ಸಾಧ್ಯವಾಗದ ಕ್ಷಣಗಳಲ್ಲಿ ದೊರೆತ ಅನಿರ್ಬಂಧಿತ ಪ್ರೀತಿ ಹಾಗೂ ಬೆಂಬಲಕ್ಕಾಗಿ ನಾನು ಋಷಿಗಳಿಗೆ ಚಿರಋಣಿ. ನನ್ನ ಹೃತ್ಪೂರ್ವಕ ಪ್ರಣಾಮಗಳನ್ನು ಮತ್ತು ಕೃತಜ್ಞತೆಗಳನ್ನು ಋಷಿಗಳಿಗೆ ಅರ್ಪಿಸುತ್ತೇನೆ.

–ಹರ್ಷದ್ ಓಕ್

ಒಂದು ದಿನ ಧ್ಯಾನದ ಕೊನೆಯಲ್ಲಿ ಸ್ವಲ್ಪ ಸಮಯ ನಾನು ಭಾರರಹಿತನಾಗಿ ಗಾಳಿಯಲ್ಲಿ ತೇಲಿದಂತೆನಿಸಿತು. ಒಂದು ಉನ್ನತ ಮಟ್ಟದಿಂದ ಈ ಪ್ರಪಂಚದಲ್ಲಿ ನಡೆಯುತ್ತಿರುವ ಎಲ್ಲ ಕಾರ್ಯಗಳನ್ನೂ ನೋಡಿದೆ. ಇದೆಲ್ಲವೂ ಕ್ಷಣಮಾತ್ರದಲ್ಲಿ ನಡೆಯಿತು. ನಂತರ ನನ್ನ ಕರೆಗಂಟೆ(alarm) ಸದ್ದುಮಾಡಿತು.

ಒಂದು ದಿನ ಬೆಳಕಿನ ಸಂಚಲನವನ್ನು ಮಾಡುತ್ತಾ ತಪೋನಗರಕ್ಕೆ ಬೆಳಕನ್ನು ಕಳುಹಿಸಿದಾಗ, ವಿಶ್ವಚೇತನ ಮಂದಿರವಿರುವ ಜಾಗದಲ್ಲಿ ಗುರೂಜಿಯವರನ್ನು ಕಂಡೆ.

–ವಿನಮ್ರ ಲೊಂಗಾನಿ

ಬಹಳ ಸಲ ಗುರೂಜಿ ಹಾಗೂ ಜಯಂತ್‌ಜಿ ಅವರ ಮಾತುಗಳನ್ನು ಕೇಳಿಸಿಕೊಂಡ ನಂತರ ಮೊದಲ ಬಾರಿಗೆ ಸಂಜೆ 6 ಗಂಟೆಗೆ ಅತ್ರಿ ಮಹರ್ಷಿಗಳೊಂದಿಗೆ ಸಂಪರ್ಕ ಸಾಧಿಸುವ ಅಭ್ಯಾಸವನ್ನು ಪ್ರಾರಂಭಿಸಿದೆ. ನನಗೆ ಅವರೊಂದಿಗೆ ಸಂಪರ್ಕ ಸಿಕ್ಕಿತೋ ಇಲ್ಲವೋ ತಿಳಿಯದು. ಆದರೆ ನಾನು ಅತ್ಯಂತ ಪ್ರಶಾಂತತೆಯನ್ನು ಅನುಭವಿಸುತ್ತೇನೆ. ಅವರ ಸಂಪರ್ಕದಲ್ಲಿದ್ದೇನೆಂದು ಅನಿಸುತ್ತದೆ ಮತ್ತು ಕಣ್ಣು ತೆರೆಯಲು ಬಹಳ ಹೊತ್ತು ಹಿಡಿಯುತ್ತದೆ.

–ಮೀನಾ ರಾಣಾ

ಅಮರಾಜೀ ಹಾಗೂ ಗುರೂಜಿಯವರು ನನ್ನನ್ನು ಯಾವಾಗಲೂ ಮಾರ್ಗದರ್ಶಿಸುತ್ತಿರುವುದು ನನಗೆ ತಿಳಿಯುತ್ತದೆ. ನಾನು ಸಂಕಟ ಹಾಗೂ ದುಃಖದಲ್ಲಿದ್ದಾಗಲೆಲ್ಲಾ ಗುರೂಜಿಯವರು ನನ್ನ ಬಳಿನಿಂತು ಸಮಾಧಾನಪಡಿಸುತ್ತಾರೆ. ಅವರೇ ನನ್ನ ಹಾಗೂ ನನ್ನ ಕುಟುಂಬದ ರಕ್ಷಕರು.

–ಜಸ್‌ಪ್ರೀತ್ ಕೌರ್

ಸುತ್ತ ಮುತ್ತಲಿರುವ ಎಲ್ಲ ಮಾನವರು ಹಾಗೂ ಇತರ ಜೀವ ರಾಶಿಗಳ ಮೇಲೆ ಯಾವುದೇ ವಿಶೇಷ ಕಾರಣವಿಲ್ಲದೆ ನನ್ನ ಹೃದಯದಲ್ಲಿ ಪ್ರೀತಿ ತುಂಬಿಬರುತ್ತದೆ. ಅದೇ ರೀತಿ ನೋವು ಹಾಗೂ ಸಂಕಟದಲ್ಲಿರುವವರ ತೀವ್ರತೆಯನ್ನು ನನ್ನ ಹೃದಯ ಗುರುತಿಸುತ್ತದೆ.

ನನ್ನ ಬಲಗಿವಿಯಲ್ಲಿ ಕೆಟ್ಟ ವಾಸನೆಯಿಂದ ಕೂಡಿದ ತೀವ್ರವಾದ ಸೋಂಕಿರುವುದನ್ನು ವೈದ್ಯರು ಕಂಡುಹಿಡಿದಿದ್ದರು. ನನ್ನ ಕಿವಿಯ ತಮಟೆಯಲ್ಲಿ ಅನೇಕ ರಂಧ್ರಗಳಿದ್ದು ಮುಂದೆ ಶಸ್ತ್ರಚಿಕಿತ್ಸೆ ಬೇಕಾಗಬಹುದೆಂದು ತಜ್ಞವೈದ್ಯರು ಅಭಿಪ್ರಾಯಪಟ್ಟಿದ್ದರು. ನಾನು ಬೆಳಕನ್ನು ಕಿವಿಯೊಳಗೆ ಸೋಂಕಿರುವ ಜಾಗಕ್ಕೆ ಕಳುಹಿಸಲು ಪ್ರಾರಂಭಿಸಿದೆ. ಆ ರಂಧ್ರಗಳು ಗುಣವಾಗುತ್ತಿರುವಂತೆ ಕಲ್ಪಿಸಿಕೊಳ್ಳುತ್ತಿದ್ದೆ. ಕೆಲವು ದಿನಗಳ ನಂತರ ಅದೇ ವೈದ್ಯರು ಆಶ್ಚರ್ಯದಿಂದ ಕಿವಿಯಲ್ಲಿನ ಎಲ್ಲಾ ಗಾಯಗಳೂ ವಾಸಿಯಾಗಿವೆ ಮತ್ತು ಮುಂದೆಯೂ ಶಸ್ತ್ರ ಚಿಕಿತ್ಸೆಯ ಅವಶ್ಯಕತೆ ಇಲ್ಲವೆಂದು ತಿಳಿಸಿದರು! ನನ್ನ ಪ್ರೀತಿ ಹಾಗು ಕೃತಜ್ಞತೆಯನ್ನು ಋಷಿಗಳಿಗೆ ಅರ್ಪಿಸಿದೆ.

– ರಾಜೇಂದ್ರ ರಂಗನೇಕರ್

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ